# ಅನಂತಪಥ

ANANTHKUMAR PRATISHTHANA




ಪುಟ 5

**ನಾನು ಕಂಡಂತೆ ಅನಂತಕುಮಾರ್**

**ಅಭಯಕುಮಾರ್ ಪಾಟೀಲ್**

ಸಂಪುಟ - 4 | ಮೇ - 2024 | ಸಂಚಿಕೆ - 47

# ಕಾರ್ಮಿಕ ಹೋರಾಟಗಳಿಗೆ ನವೀನ ಆಯಾಮ



ಬೆಂಗಳೂರಿನ ಕಾರ್ಮಿಕ ಕ್ಷೇತ್ರದಲ್ಲಿ ಬ್ಯಾಂಕಿಂಗ್ ವಲಯದ ಕಾರ್ಮಿಕ ಸಂಘಗಳು ದೀರ್ಘಕಾಲದ ಇತಿಹಾಸವನ್ನು ಹೊಂದಿವೆ. ಬಹುತೇಕ ಎಲ್ಲ ಬ್ಯಾಂಕುಗಳಲ್ಲಿ ವಾಮಪಂಥೀಯ ಸಂಘಟನೆಗಳಿಗೆ ಸಂಯೋಜಿತವಾದ ಸಂಘಗಳೇ ಪ್ರಾಬಲ್ಯವನ್ನು ಹೊಂದಿದ್ದವು. ಭಾರತೀಯ ಸ್ಟೇಟ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ ಮತ್ತು ಇಂಡಿಯನ್ ಓವರ್ಸೀಸ್ ಬ್ಯಾಂಕುಗಳಲ್ಲಿ ಯಾವುದೇ ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳಿಗೆ ಸೇರದ ರಾಜಕೀಯೇತರವಾದ ಸಂಘಟನೆಗಳಿದ್ದರೂ ಅವುಗಳ ನಾಯಕತ್ವವನ್ನು ಕಮ್ಯೂನಿಸ್ಟ್ ಸಂಘಟನೆಗಳಿಂದ ಹೊರಬಂದ ಸಮಾಜವಾದಿ ಧೋರಣೆಯ ವ್ಯಕ್ತಿಗಳೇ ವಹಿಸಿದ್ದರು. ಭಾರತೀಯ ಮಜ್ದೂರ್ ಸಂಘವು ೧೯೫೫ರಲ್ಲಿಯೇ ಪ್ರಾರಂಭವಾದರೂ ಒಂದು ಸಂಘಟನೆಯಾಗಿ ಗುರುತಿಸಿಕೊಂಡದ್ದು ೧೯೬೭ರಲ್ಲಿ ನಡೆದ ಅದರ ಪ್ರಥಮ ಮಹಾಧಿವೇಶನದ ನಂತರ. ಇದೇ ಸಮಯದಲ್ಲಿ ಬ್ಯಾಂಕುಗಳಲ್ಲಿ ಭಾರತೀಯ ಮಜ್ದೂರ್ ಸಂಘಕ್ಕೆ ಸಂಯೋಜಿತವಾದ ನ್ಯಾಷನಲ್ ಆರ್ಗನೈಸೇಷನ್ ಆಫ್ ಬ್ಯಾಂಕ್ ವರ್ಕರ್ಸ್ ಎಂಬ ಸಂಘಟನೆಯು ವಿವಿಧ ಬ್ಯಾಂಕುಗಳಲ್ಲಿ ತನ್ನ ಘಟಕಗಳನ್ನು ಸ್ಥಾಪಿಸಲು ಮುಂದಾಯಿತು. ೧೯೬೯ರಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣದ ಕಾಲದಲ್ಲಿ ಅದರ ಪರ-ವಿರೋಧ ನಿಲುವುಗಳನ್ನು ಕಾರ್ಮಿಕ ಸಂಘಗಳು ತಮ್ಮ ನಿಯಂತ್ರಕ ಶಕ್ತಿಗಳ ನಿಲುವುಗಳಿಗನುಸಾರವಾಗಿ ತಳೆದವು. ೧೯೭೦ರ ಬ್ಯಾಂಕಿಂಗ್ ಕಂಪೆನಿಗಳ ಅಧಿನಿಯಮವು ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಕಾರ್ಮಿಕರನ್ನು ಪ್ರತಿನಿಧಿಸುವ ನಿರ್ದೇಶಕರ ಆಯ್ಕೆಗೆ ಅವಕಾಶ ಮಾಡಿಕೊಟ್ಟಾಗ ಸಂಘಗಳ ಪ್ರಭಾವ ಹೆಚ್ಚತೊಡಗಿತು. ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲಿಯೂ ವಿಜಯಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್ ಮತ್ತು ಕಾರ್ಪೊರೇಷನ್ ಬ್ಯಾಂಕುಗಳಲ್ಲಿ ನ್ಯಾಷನಲ್ ಆರ್ಗನೈಸೇಷನ್ ಆಫ್ ಬ್ಯಾಂಕ್ ವರ್ಕರ್ಸ್ ಕೂಡ ಬ್ಯಾಂಕ್ ಉದ್ಯೋಗಿಗಳ ನಡುವೆ ಪ್ರಭಾವಶಾಲಿಯಾಗಿ ಬೆಳೆಯಿತು.

ಎಪ್ಪತ್ತರ ದಶಕದಲ್ಲಿ ತುರ್ತುಪರಿಸ್ಥಿತಿಯ ಕಾಲದಲ್ಲಿ ಕಾರ್ಮಿಕರು ಸಂಘಟಿತರಾಗುವ ತಮ್ಮ ಮೂಲಭೂತ ಹಕ್ಕನ್ನು ಕಳೆದುಕೊಂಡರು. ಜೊತೆಗೆ ಕಮ್ಯೂನಿಸ್ಟ್ ಬೆಂಬಲಿತ ಸಂಘಗಳು ಸರಕಾರದ ಭಾಗವೇ ಆಗಿ ಪ್ರಬಲವಾದವು. ಈ ಹಿನ್ನೆಲೆಯಲ್ಲಿ ಬಿಎಂಎಸ್ ಸಂಯೋಜಿತವಾದ ಸಂಘಗಳು ಅಸ್ತಿತ್ವದಲ್ಲಿರುವುದೇ ದುಸ್ತರವಾಯಿತು. ಆದರೂ ಎಂಭತ್ತರ ದಶಕದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನಲ್ಲಿ ಸಕ್ರಿಯರಾಗಿದ್ದ ಅನೇಕರು ಬ್ಯಾಂಕುಗಳನ್ನು ಸೇರಿ ನ್ಯಾಷನಲ್ ಆರ್ಗನೈಸೇಷನ್ ಆಫ್ ಬ್ಯಾಂಕ್ ವರ್ಕರ್ಸ್ ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ನಾಯಕತ್ವವನ್ನು ವಹಿಸಿಕೊಂಡರು. ಅವರಲ್ಲಿ ವಿಜಯಾ ಬ್ಯಾಂಕಿನ ಶ್ರೀ ರಾಮಕೃಷ್ಣ ಪೂಂಜಾ, ಸಿಂಡಿಕೇಟ್ ಬ್ಯಾಂಕಿನ ಶ್ರೀ ಕೆ ವಿ ಶ್ರೀನಿವಾಸ ಭಟ್ ಮತ್ತು ಕೆನರಾ ಬ್ಯಾಂಕಿನ ಮೋಹನ್ ಕುಮಟಾಕರ್ ಅನಂತಕುಮಾರ್ ಅವರ ಪ್ರಭಾವ ವಲಯದಲ್ಲಿದ್ದವರು. ಅವರೆಲ್ಲರ ಜೊತೆಯಲ್ಲಿ ಅನಂತಕುಮಾರ್ ಇದ್ದಾರೆ ಎಂಬ ವಿಶ್ವಾಸವೇ ಸಂಘಟನೆಯ ಸದಸ್ಯರಿಗೆ ಭವಿಷ್ಯದ ಭರವಸೆ ಮೂಡಿಸಿತ್ತು.

ಪುಟ 4 ರಲ್ಲಿ ಮುಂದುವರಿದಿದೆ

# ಚುನಾವಣಾ ರಾಜಕೀಯದ ಚಾಣಕ್ಯ- ಅನಂತಕುಮಾರ್




ಅನಂತಕುಮಾರ್ ಅತ್ಯಂತ ಯಶಸ್ಸುಗಳಿಸಿದ ಇನ್ನೊಂದು ರಾಜ್ಯ ಮಧ್ಯಪ್ರದೇಶ. ಅವರಿಗೆ ಆ ರಾಜ್ಯದೊಡನೆ ಮೊದಲಿನಿಂದಲೂ ಒಂದು ವಿಶೇಷ ಸಂಬಂಧವಿತ್ತು. ೧೯೯೨ರಲ್ಲಿಯೇ ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಧ್ವಜ ಹೋರಾಟ ನಡೆಸಿದಾಗ ಮಧ್ಯಪ್ರದೇಶದಿಂದ ಸಾಧ್ವಿ ಉಮಾಭಾರತಿಯವರು ಹುಬ್ಬಳ್ಳಿಗೆ ಆಗಮಿಸಿ ನೇತೃತ್ವ ವಹಿಸಿದ್ದರು. ಅನಂತಕುಮಾರ್ ಕೇಂದ್ರದಲ್ಲಿ ಮಂತ್ರಿಯಾಗಿದ್ದಾಗ ಉಮಾಭಾರತಿಯವರೂ ಮಂತ್ರಿಯಾಗಿದ್ದರು. ಅದ್ವಾನಿಯವರು ಬೆಳೆಸಿದ ಎರಡನೆಯ ಸಾಲಿನ ನಾಯಕರಲ್ಲಿ ಅನಂತಕುಮಾರ್ ಮತ್ತು ಉಮಾಭಾರತಿ ಸೇರಿದ್ದರು. ಉಮಾ ಭಾರತಿ ಮುಖ್ಯಮಂತ್ರಿಯಾಗಿದ್ದಾಗ ಅನಂತಕುಮಾರ್ ಒಂದೆರಡು ಬಾರಿ ಮಧ್ಯಪ್ರದೇಶಕ್ಕೆ ಭೇಟಿ ನೀಡಿದ್ದರು. ನಂತರ ಅವರು ಮುಖ್ಯಮಂತ್ರಿಯಾಗಿ ರಾಜೀನಾಮೆ ಕೊಡಬೇಕಾಗಿ ಬಂದಾಗ ಅನಂತಕುಮಾರರನ್ನೇ ಕಳಿಸಿ ರಾಜೀನಾಮೆ ಪಡೆಯಲಾಗಿತ್ತು. ಜೊತೆಗೆ ಮುಂದಿನ ಮುಖ್ಯಮಂತ್ರಿಗಳ ಆಯ್ಕೆಯ ಜವಾಬ್ದಾರಿಯನ್ನೂ ಅವರಿಗೆ ವಹಿಸಲಾಗಿತ್ತು. ಉಮಾಭಾರತಿಯವರ ನಂತರ ಬಾಬುಲಾಲ್ ಗೌರ್ ಕೆಲಕಾಲ ಮುಖ್ಯಮಂತ್ರಿಯಾಗಿದ್ದರು. ಅವರ ನಂತರ ಶಿವರಾಜ್ ಸಿಂಗ್ ಚೌಹಾಣ್ ಮುಖ್ಯಮಂತ್ರಿಯಾದರು.

ಆಗ ಮಧ್ಯಪ್ರದೇಶ ಕ್ಷೋಭೆಯನ್ನೆದುರಿಸುತ್ತಿತ್ತು. ದಿಗ್ವಿಜಯ ಸಿಂಗ್ ಅವರ ಹತ್ತುವರ್ಷಗಳ ಆಡಳಿತದಲ್ಲಿ ರಾಜ್ಯದ ಪ್ರಗತಿ ಕುಂಠಿತವಾಗಿತ್ತು, ಆಡಳಿತ ಯಂತ್ರ ಕುಸಿದಿತ್ತು. ಉಮಾಭಾರತಿಯವರ ರಾಜೀನಾಮೆಯಿಂದ ಕೆಲವು ಕಾರ್ಯಕರ್ತರಲ್ಲಿ ಅಸಮಾಧಾನ ಕೂಡ ನೆಲೆ ಮಾಡಿತ್ತು. ಇಂತಹ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಅನಂತಕುಮಾರರನ್ನು ರಾಜ್ಯದ ಚುನಾವಣಾ ಉಸ್ತುವಾರಿಯನ್ನಾಗಿ ಕಳಿಸಲಾಗಿತ್ತು. ಅನಂತಕುಮಾರ್ ಚುನಾವಣೆಯ ಕಾಲದ ಉಸ್ತುವಾರಿಯಂತೆ ವರ್ತಿಸದೆ ಕನಿಷ್ಠ ತಿಂಗಳಿಗೊಮ್ಮೆ, ಕೆಲವು ತಿಂಗಳಲ್ಲಿ ಎರಡು ಮೂರು ಬಾರಿ ಮಧ್ಯಪ್ರದೇಶಕ್ಕೆ ಭೇಟಿ ನೀಡತೊಡಗಿದರು. ಕೇವಲ ಲೋಕಸಭಾ ಚುನಾವಣೆಗೆ ತಮ್ಮನ್ನು ಸೀಮಿತಗೊಳಿಸದೆ, ವಿಧಾನಸಭೆ, ಜಿಲ್ಲಾ ಮಟ್ಟದ ಚುನಾವಣೆ ಮತ್ತು ಗ್ರಾಮ ಪಂಚಾಯತಿ ಚುನಾವಣೆಗಳ ಬಗ್ಗೆಯೂ ಗಮನ ಹರಿಸಿದರು. ಪರಿಣಾಮವಾಗಿ ೨೦೦೮ರ ಚುನಾವಣೆಯಲ್ಲಿ ಮತ್ತೆ ಪಕ್ಷ ಅಧಿಕಾರಕ್ಕೆ ಬಂದಿತು. ೨೦೧೩ರ

ಪುಟ 6 ರಲ್ಲಿ ಮುಂದುವರಿದಿದೆ

## ಶ್ರದ್ಧಾಂಜಲಿ



**ಬಿಹಾರದ ಮಾಜಿ ಉಪಮುಖ್ಯಮಂತ್ರಿ, ಅನಂತಕುಮಾರರ ದೀರ್ಘಕಾಲದ ಸಹವರ್ತಿ ಶ್ರೀ ಸುಶೀಲ್ ಕುಮಾರ್ ಮೋದಿ ಯವರು 2024 ರ ಮೇ 13ರಂದು ನಿಧನರಾದರು.**

**ವಿಸ್ತೃತ ಲೇಖನಕ್ಕಾಗಿ 7ನೇ ಪುಟ ನೋಡಿ**

ಶ್ರದ್ಧೆಯ ಶಿಲ್ಪ
ಟಿ. ಎಸ್. ಗೋಪಾಲ್

# ಆವನಿಯ ದೇವಾಲಯ ಸಂಕೀರ್ಣ







ಕನ್ನಡನಾಡಿನ ಚರಿತ್ರೆಯಲ್ಲಿ ಹೆಸರುವಾಸಿಯಾದ ಸಾಮಂತ ಅರಸು ಮನೆತನಗಳ ಪೈಕಿ ನೊಳಂಬರಾಜರೂ ಪ್ರಮುಖಸ್ಥಾನ ಪಡೆಯುತ್ತಾರೆ. ಕ್ರಿ.ಶ. 750-1050ರವರೆಗೆ ನೊಳಂಬರ ರಾಜವಂಶವು ನಮ್ಮ ನಾಡನ್ನು ಆಳಿದ ದಾಖಲೆಗಳಿವೆ. ಈಗಿನ ಅನಂತಪುರ, ಕೋಲಾರ, ತುಮಕೂರು, ಬೆಂಗಳೂರು ಮೊದಲಾದವು ಈ ರಾಜರ ಆಳ್ವಿಕೆಗೆ ಒಳಪಟ್ಟಿದ್ದ ಪ್ರದೇಶಗಳು. ಪಲ್ಲವರು, ಗಂಗರು, ಚಾಲುಕ್ಯರು ಮೊದಲಾದವರಿಗೆ ಅಧೀನರಾಗಿದ್ದ ನೊಳಂಬರಾಜರು ತಮ್ಮ ಆಳ್ವಿಕೆಯ ಹಿರಿಮೆಗೆ ಸಾಕ್ಷಿಯಾಗಿ ಶಾಸನಗಳನ್ನು ದಾಖಲಿಸಿರುವುದಲ್ಲದೆ ಹಲವು ದೇಗುಲಗಳನ್ನೂ ನಿರ್ಮಿಸಿದ್ದಾರೆ. ಅವುಗಳಲ್ಲಿ - ಕೋಲಾರ ಜಿಲ್ಲೆಯ ಆವನಿಯಲ್ಲಿರುವ ರಾಮೇಶ್ವರ ದೇಗುಲ ಸಮೂಹವು ಗಮನಾರ್ಹವಾಗಿದೆ.

ಆವನಿ - ಕೋಲಾರ ಜಿಲ್ಲೆಯ ಮುಳಬಾಗಲಿನಿಂದ ಹದಿನೈದು ಕಿಲೋಮೀಟರ್ ದೂರದಲ್ಲಿರುವ ಒಂದು ಗ್ರಾಮ. ಈ ಕ್ಷೇತ್ರಕ್ಕೆ ಪೂರ್ವದಲ್ಲಿ ಆಹವನೀಯ (ಹೋಮಾಗ್ನಿ) ಎಂಬ ಹೆಸರಿತ್ತೆನ್ನುವುದು ಇಲ್ಲಿನ ಸ್ಥಳಪಾವಿತ್ರ್ಯಕ್ಕೆ ದ್ಯೋತಕ. ಆವನಿಯು ಉತ್ತರ ರಾಮಾಯಣದ ವಾಲ್ಮೀಕಿ ಆಶ್ರಮದ ನೆಲೆಯಾಗಿದ್ದು, ಇಲ್ಲೇ ಲವಕುಶರ ಜನನ, ಬಾಲ್ಯ, ತನ್ನ ಮಕ್ಕಳೊಡನೆ ರಾಮನ ಸಮಾಗಮ ಮೊದಲಾದವು ನಡೆದಿವೆಯೆಂಬ ಐತಿಹ್ಯವಿದೆ.

ಆವನಿಯ ಬೆಟ್ಟದ ಬುಡದ ವಿಶಾಲವಾದ ಪ್ರಾಂಗಣದಲ್ಲಿ ನಿರ್ಮಿತವಾಗಿರುವ ಮುಖ್ಯ ದೇವಾಲಯವನ್ನು ಪ್ರಸಿದ್ಧ ನೊಳಂಬ ದೊರೆ ಮಹೇಂದ್ರನ ತಾಯಿ ದೇವಬ್ಬರಸಿಯು ನಿರ್ಮಿಸಿದಳೆಂದು ಹೇಳಲಾಗಿದೆ. ಆವನಿಯ ಶಾಸನವೊಂದರಲ್ಲಿ ಹೇಳಿದಂತೆ, ತ್ರಿಭುವನ ಕರ್ತಾರನೆಂಬ ತಪಸ್ವಿಯು “ಆವನ್ಯವಸ್ಥಾನಮಂ ನಾಲ್ವತ್ತು ವರ್ಷಮನಾಳ್ದು, ಅಯಿವತ್ತು ದೇಗುಲಂಮಾಡಿ, ಪಿರಿಯವೆರಡು ಕೆರೆಯಂ ಕಟ್ಟಿದ”ನಂತೆ. ಈ ತಪಸ್ವಿಯ ಕಾಲ ಹತ್ತನೆಯ ಶತಮಾನ. ಇದೇ ಅವಧಿಯಲ್ಲಿ ಈ ದೇವಾಲಯ ಸಂಕೀರ್ಣದ ಉಳಿದ ದೇಗುಲಗಳು ನಿರ್ಮಾಣವಾಗಿರಬಹುದು.

ಆವನಿಯ ಈ ದೇಗುಲ ಸಂಕೀರ್ಣದಲ್ಲಿ ರಾಮೇಶ್ವರ ದೇವಾಲಯವಲ್ಲದೆ, ಲಕ್ಷ್ಮಣೇಶ್ವರ, ಭರತೇಶ್ವರ, ಶತ್ರುಘ್ನೇಶ್ವರ, ರಾಮಾಂಜನೇಯ ಹಾಗೂ ಪಾರ್ವತಿಯ ದೇಗುಲಗಳೂ ಇವೆ. ವಿಜಯನಗರದ ಅರಸರೂ ಸೇರಿದಂತೆ, ಮುಂದಿನ ಶತಮಾನಗಳಲ್ಲಿ ಈ ಪ್ರಾಂತ್ಯವನ್ನು ಆಳಿದ ವಿವಿಧ ಅರಸರ ಆಡಳಿತಾವಧಿಯಲ್ಲಿ ಈ ದೇವಾಲಯಗಳ ಜೀರ್ಣೋದ್ಧಾರವೂ ಹೆಚ್ಚುವರಿ ನಿರ್ಮಾಣಕಾರ್ಯಗಳೂ ನಡೆದಿವೆ. ಇದರಿಂದಾಗಿ ಇಲ್ಲಿರುವ ವಿವಿಧ ದೇಗುಲಗಳ ಕಟ್ಟಡದ ನಿರ್ಮಿತಿ ಏಕರೂಪದಲ್ಲಿ ಉಳಿದಿಲ್ಲ. ಆದರೆ, ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಈ ಸಂಕೀರ್ಣವು ತಕ್ಕಮಟ್ಟಿಗೆ ಸುರಕ್ಷಿತವಾಗಿ ಉಳಿದುಬರಲು ಅವಕಾಶವಾಗಿದೆ. ನೊಳಂಬರ ಕಾಲದ ಶಿಲ್ಪಕಲೆಯ ಹಲವಾರು ಸುಂದರ ಮಾದರಿಗಳನ್ನು ಇಲ್ಲಿ ಕಾಣಬಹುದು.

ರಾಮೇಶ್ವರ ಮತ್ತು ಲಕ್ಷ್ಮಣೇಶ್ವರ ಗುಡಿಗಳಲ್ಲಿ ದೊಡ್ಡ ದೊಡ್ಡ ಶಿವಲಿಂಗಗಳಿವೆ. ಈ ದೇವಾಲಯಗಳ ಗೋಡೆಗಳ ಮೇಲೆ ಅನೇಕ ಶಿಲ್ಪಗಳು ಕಂಡುಬರುತ್ತವೆ. ವೃಷಭವಾಹನ ಶಿವ, ದುರ್ಗೆ, ಭೈರವಿ, ಮಹಿಷಮರ್ದಿನಿ ಮೊದಲಾದ ಶಿಲ್ಪಗಳು ನೊಳಂಬರ ಕಾಲದ ಶಿಲ್ಪಕಲೆಯ ಆಕರ್ಷಕ ನಿದರ್ಶನಗಳಾಗಿವೆ. ಗಜಾಸುರನನ್ನು ಸೀಳಿ ನರ್ತಿಸುತ್ತಿರುವ ಶಿವ, ಊರ್ಧ್ವಮುಖವಾಗಿ ಕಾಲನ್ನೆತ್ತಿ ನರ್ತಿಸುತ್ತಿರುವ ನಟರಾಜನ ಶಿಲ್ಪಗಳು ವಿಶೇಷವಾಗಿ ನೋಡತಕ್ಕವು. ನೊಳಂಬರ ವಾಸ್ತುಶಿಲ್ಪದ ವೈಶಿಷ್ಟ್ಯವೆಂದರೆ ಜಾಲಂದ್ರ (ಕಿಟಕಿ)ಗಳ ವಿನ್ಯಾಸ. ಇಲ್ಲಿನ ಜಾಲಂದ್ರಗಳಲ್ಲಿ ವಿವಿಧ ಮೂರ್ತಿರೂಪಗಳನ್ನು ಕೆತ್ತಿರುವ ಶೈಲಿ ಗಮನಾರ್ಹ. ನೊಳಂಬ ಶೈಲಿಯ ಇನ್ನೊಂದು ಮಹತ್ವದ ಕೆತ್ತನೆಯೆಂದರೆ, ನವರಂಗದ ಒಳಛಾವಣಿ(ಭುವನೇಶ್ವರಿ)ಯಲ್ಲಿ ಅಷ್ಟದಿಕ್ಪಾಲಕರಿಂದ ಸುತ್ತುವರಿಯಲ್ಪಟ್ಟ ಶಿವಪಾರ್ವತಿಯರ ಶಿಲ್ಪ. ಈ ಕೆತ್ತನೆಯನ್ನು ಲಕ್ಷ್ಮಣೇಶ್ವರ ದೇವಾಲಯದಲ್ಲಿ ಕಾಣಬಹುದು.

ಈ ಸಂಕೀರ್ಣದ ದೇವಾಲಯಗಳ ಕಂಬಗಳ ಮೇಲೆ ಕೆತ್ತಲಾಗಿರುವ ಉಬ್ಬುಶಿಲ್ಪಗಳಲ್ಲಿ ವಿವಿಧ ಭಂಗಿಗಳಲ್ಲಿ ನರ್ತಿಸುತ್ತಿರುವ ನರ್ತಕಿಯರು, ಗಣಪತಿ, ಕಾರ್ತಿಕೇಯ, ವೃಷಭಾರೂಢ ಶಿವ, ಪರವಾಸುದೇವ ವಿಷ್ಣು, ವೇಣುಗೋಪಾಲ, ಅಶ್ವಾರೂಢ ಸೈನಿಕರು ಮೊದಲಾದ ಶಿಲ್ಪಗಳು ಆಕರ್ಷಕವಾಗಿವೆ. ದೇವಾಲಯಗಳ ಹೊರಗೆ ನಂದಿಮಂಟಪದಲ್ಲಿರುವ ನಂದಿಗಳಲ್ಲದೆ, ಒಳಗುಡಿಯಲ್ಲೂ ನಂದಿಯ ಹಲವು ವಿಗ್ರಹಗಳಿವೆ. ಒಳಗುಡಿಯ ನವರಂಗದಲ್ಲಿ ಸಪ್ತಮಾತೃಕೆಯರು, ಚಂಡಿಕೇಶ್ವರರ ಮೂರ್ತಿಗಳೊಡನೆ, ಸೂರ್ಯನ ಆಕರ್ಷಕ ಶಿಲ್ಪವೊಂದನ್ನು ಕಾಣಬಹುದು. ಹದಿಮೂರನೆಯ ಶತಮಾನದ ವಿಜಯನಗರದ ಸಾಮಂತರಾಜ ಇಳವಂಜಿರಾಯನು ಈ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದನು. ಈತನ ವಿಗ್ರಹವೊಂದು ಲಕ್ಷ್ಮಣೇಶ್ವರ ದೇಗುಲದ ನವರಂಗದಲ್ಲಿ ಸ್ಥಾಪಿತವಾಗಿದೆ.

ಹೊಯ್ಸಳ ದೇಗುಲಗಳಿಗಿಂತ ಪ್ರಾಚೀನವಾದ ಈ ಗುಡಿಗಳು ನಾಡಿನ ಶಿಲ್ಪಕಲೆಯ ಚರಿತ್ರೆಯಲ್ಲಿ ನೊಳಂಬರು ನೀಡಿದ ಮಹತ್ವದ ಕೊಡುಗೆಗಳಾಗಿವೆ. ಪಟ್ಟದಕಲ್ಲು, ಐಹೊಳೆಗಳ ದೇವಾಲಯಸಮೂಹಗಳನ್ನು ನೆನಪಿಸುವಂತಿರುವ ಆವನಿಯ ದೇಗುಲಸಂಕೀರ್ಣವೂ ಸುತ್ತಲಿನ ಬೆಟ್ಟ, ಕಲ್ಲುಬಂಡೆಗಳ ಪರಿಸರವೂ ಎಲ್ಲಕ್ಕಿಂತ ಮುಖ್ಯವಾಗಿ ಅಲ್ಲಿನ ಪ್ರಶಾಂತತೆಯೂ ಸಂದರ್ಶಕರ ಮನಸೆಳೆಯುವುದರಲ್ಲಿ ಸಂದೇಹವಿಲ್ಲ. **ಸೌಜನ್ಯ: ಆಕಾಶವಾಣಿ, ಮೈಸೂರು** ◆







# ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

## ಅಧ್ಯಾಯ-23

# ಅನಂತನ ಮನೆವಾರ್ತೆ



ತನ್ನ ಜೀವನದಲ್ಲಿ ಮೊತ್ತಮೊದಲ ಬಾರಿಗೆ ಅನಂತಕುಮಾರನಿಗೆ ಹಿರಿತನದ ಜವಾಬ್ದಾರಿ ಬಂದೊದಗಿತ್ತು. ಇನ್ನೂ ಹದಿನೈದು ವರುಷದ ಹುಡುಗ ತನ್ನ ತಮ್ಮ ತಂಗಿಯರನ್ನು ಸಂತೈಸುವುದರೊಡನೆ ಮನೆವಾರ್ತೆಯನ್ನೂ ನಿರ್ವಹಿಸಬೇಕಾಗಿತ್ತು. ವೆಂಕಟರಾಮ್ ಮತ್ತು ರಾಜೇಶ್ವರಿ ಇಬ್ಬರೂ ಈ ಮೂವರ ಯೋಗಕ್ಷೇಮದ ಬಗೆಗೆ ಕಾಳಜಿ ವಹಿಸಿದ್ದರು. ಪ್ರತಿದಿನ ಊಟಕ್ಕೆ ಅವರ ಮನೆಯಿಂದ ಸಾರು, ಸಾಂಬಾರ್ ಕೊಟ್ಟುಕಳುಹಿಸುತ್ತಿದ್ದರು. ಅನ್ನವೊಂದನ್ನು ಅನಂತಕುಮಾರನೇ ಮಾಡಿಡುತ್ತಿದ್ದ.

ತಮ್ಮ ತಾಯಿಗೆ ಬಂದೊದಗಿದ ಆಪತ್ತಿನ ಬಗೆಗೆ ಸುವಾಸಿನಿಗಾಗಲಿ, ನಂದಕುಮಾರನಿಗಾಗಲಿ ತಿಳುವಳಿಕೆಯಿರಲಿಲ್ಲ. ಆ ಮಕ್ಕಳು ಅದುವರೆಗೂ ಅಪ್ಪ, ಅಮ್ಮನನ್ನು ಬಿಟ್ಟು ಇದ್ದವರೇ ಅಲ್ಲ. ಅವರಿಗೆ ತಾಯ್ತಂದೆಯರ ಅಗಲಿಕೆಯ ಬೇಸರ ಕಾಡದಂತೆ ನೋಡಿಕೊಳ್ಳುವುದು ಅನಂತನ ದೊಡ್ಡ ಜವಾಬ್ದಾರಿಯಾಗಿತ್ತು. ಒಂದು ಚಾಕಲೇಟು ಬೇಕೆಂಬ ಬೇಡಿಕೆಯಿಂದ ಮೊದಲುಗೊಂಡು ಕ್ಯಾನ್‌ವಾಸ್ ಷೂ ಕೊಡಿಸುವವರೆಗೂ ಅನಂತ ತನ್ನ ತಮ್ಮತಂಗಿಯರ ಬೇಡಿಕೆಗಳನ್ನು ಶ್ರದ್ಧೆಯಿಂದ ಈಡೇರಿಸಿ ಸಂತೋಷಗೊಳಿಸುತ್ತಿದ್ದ.

ತನ್ನ ತಾಯಿಗೆ ಎರಗಿದ ಅನಾರೋಗ್ಯದ ತೀವ್ರತೆಯ ಅರಿವು ಅನಂತನಿಗಿತ್ತು. ಆದರೆ ಪಾಪ, ಇನ್ನೂ ಚಿಕ್ಕವರಾದ ಒಡಹುಟ್ಟಿದವರೊಡನೆ ಆ ವಿಷಾದವನ್ನು ಹಂಚಿಕೊಳ್ಳಲು ಸಾಧ್ಯವಿರಲಿಲ್ಲ. ತಮ್ಮ ಯೋಗಕ್ಷೇಮವನ್ನು ತಿಳಿಸುವ ನೆಪದಲ್ಲಿ ಅನಂತಕುಮಾರ ಅಮ್ಮನಿಗೇ ಪತ್ರಗಳನ್ನು ಬರೆಯುತ್ತ ಧೈರ್ಯ ತುಂಬುತ್ತಿದ್ದ. "ಶ್ರೀ ರಮಣ ಮಹರ್ಷಿಗಳು ಹೇಗೆ ತಮ್ಮನ್ನು ಕಾಡಿದ ಕ್ಯಾನ್ಸರ್ ರೋಗವನ್ನು ಧೈರ್ಯದಿಂದ ಎದುರಿಸಿದರೋ ಹಾಗೆಯೇ ನೀವೂ ಈ ಖಾಯಿಲೆಯನ್ನು ಧೈರ್ಯವಾಗಿ ಎದುರಿಸಿ, ನಮ್ಮನ್ನು ನೋಡಿಕೊಳ್ಳುವುದಕ್ಕೆ ನೀವು ಮರಳಿ ಬಂದೇ ಬರುತ್ತೀರಿ ಎಂಬ ಧೈರ್ಯ ನಮಗೂ ಇದೆ" ಎಂದು ಒಂದು ಪತ್ರದಲ್ಲಿ ಬರೆದಿದ್ದ. ಹತ್ತನೆಯ ತರಗತಿ ಓದುವ ಹುಡುಗನಿಗೆ ಇಂಥ ಸಾಂತ್ವನ ಹೇಳಬಲ್ಲ ಶಕ್ತಿಯಿದ್ದುದು ಅಪೂರ್ವವೇ ಸರಿ.

ಕಾಲೊನಿಯಲ್ಲಾಗಲಿ ಮನೆಯಲ್ಲಾಗಲಿ ಯಾವ ಮನರಂಜನೆಯ ಸಾಧನಗಳೂ ಇರಲಿಲ್ಲ. ಮಕ್ಕಳಿಗೆ ಬೇಸರವಾಗಬಾರದೆಂದು ಅನಂತ ತಮ್ಮ ತಂಗಿಯರಿಬ್ಬರನ್ನೂ ಸೈಕಲ್ ಮೇಲೆ ಕೂರಿಸಿಕೊಂಡು ಸುತ್ತಾಡಿಸಿ ಕರೆದುಕೊಂಡು ಬರುತ್ತಿದ್ದ. ಅವರು ಏನು ಕೊಡಿಸಬೇಕೆಂದು ಬೇಡಿದರೆ, ತನ್ನ ಬಳಿ ಎಷ್ಟು ಹಣವುಳಿದಿದೆಯೋ ಯೋಚಿಸದೆ ಅದನ್ನು ಹಿಂಜರಿಯದೆ ಕೊಡಿಸುತ್ತಿದ್ದ. ಅವರಿಗೆ ಬೇಸರವಾಗದಂತೆ ಜತನದಿಂದ ನೋಡಿಕೊಳ್ಳುತ್ತಿದ್ದ.

ಒಂದು ದಿನ ಬೆಳಗ್ಗೆ ಯಾವುದೋ ಆಟದ ವಿಷಯಕ್ಕೋ ಏನೋ ಮಾತು ಬೆಳೆದು ಜಗಳಕ್ಕಿಟ್ಟುಕೊಂಡಿತು. ತಮ್ಮನಿಗೆ ತಾನು ಹೇಳಿದಂತೆ ಕೇಳಬೇಕು ಎಂದು ಎಚ್ಚರಿಕೆ ಹೇಳಿ ಅನಂತ ಹಿತ್ತಿಲಿಗೆ ಹೋಗಿ ಪಾತ್ರೆ ತೊಳೆಯುತ್ತ ಕುಳಿತಿದ್ದ. "ನೀನು ಹೇಳಿದ ಮಾತು ನಾನು ಏಕೆ ಕೇಳಬೇಕು, ನಾನು ಕೇಳುವುದಿಲ್ಲ" ಎಂದು ನಂದಕುಮಾರ ವಾದಿಸತೊಡಗಿದ. ಅಣ್ಣನ ಮಾತು ಕೇಳಲೊಲ್ಲದೆ ನಂದಕುಮಾರ ತಾನು ಮನೆ ಬಿಟ್ಟು ಹೋಗುವುದಾಗಿ ಹೇಳಿಬಿಟ್ಟ!

ಅನಂತಕುಮಾರ ಈಗ ತಮ್ಮನನ್ನು ಸಂತೈಸತೊಡಗಿದ. "ನೀನು ಮನೆ ಬಿಟ್ಟು ಹೋಗುವುದಾದರೂ ಎಲ್ಲಿಗೆ? ಹಾಗೆಲ್ಲ ಮನೆಬಿಟ್ಟು ಹೋಗಬಾರದು. ಹೋಗ್ತೀನಿ ಅಂತ ಹೇಳಲೂ ಬಾರದು. ಒಳಗೆ ಹೋಗಿ ಕೂತುಕೊಂಡು ಓದು. ಹಾಗೆಲ್ಲ ಹೇಳಬಾರದು"

ನಂದಕುಮಾರನಿಗೆ ಸಿಟ್ಟು ಆರಿರಲಿಲ್ಲ. ಮನೆ ಬಿಟ್ಟು ಹೊರಟೇಬಿಟ್ಟ. ಇನ್ನೂ ಎಂಟನೆಯ ತರಗತಿಯ ಹುಡುಗ. ಎಲ್ಲಿಗೆ ತಾನೇ ಹೋದಾನು?

ಅಲ್ಲೇ ಸ್ವಲ್ಪ ದೂರದಲ್ಲಿ ಒಂದು ಕೇರಂ ಬೋರ್ಡಿನ ಕ್ಲಬ್ ಇದ್ದಿತು. ಅರ್ಧಗಂಟೆ ಕಳೆಯುವಷ್ಟರಲ್ಲಿ ಅನಂತಕುಮಾರ್ ಸೈಕಲೇರಿ ಅಲ್ಲಿಗೆ ಬಂದ. ಅವನು ನಿರೀಕ್ಷಿಸಿದ್ದಂತೆ, ನಂದಕುಮಾರ ಅಲ್ಲಿಯೇ ಕುಳಿತಿದ್ದ. "ನೀನು ಎಲ್ಲಿಗೆ ಹೋಗಿರುತ್ತೀಯ ಅಂತ ನನಗೆ ಗೊತ್ತಿತ್ತು. ನಡಿ ಮನೆಗೆ ಹೋಗೋಣ" ಎಂದು ಸೈಕಲ್ ಮೇಲೆ ಕೂರಿಸಿಕೊಂಡು ಮನೆಗೆ ಕರೆದುಕೊಂಡು ಬಂದ. ಅಷ್ಟರಲ್ಲಿ ವಿಷಯ ತಿಳಿದ ರಾಜೇಶ್ವರಿ ಮಾಮಿಯವರು ಬಂದು ಹಾಗೆಲ್ಲ ಅಣ್ಣನೊಡನೆ ಜಗಳವಾಡುವುದು, ಎದುರು ವಾದಿಸುವುದೆಲ್ಲ ಮಾಡಬಾರದು" ಎಂದು ನಂದಕುಮಾರನಿಗೆ ಬುದ್ಧಿ ಹೇಳಿದರು.

ವೆಲ್ಲೂರಿನ ಚಿಕಿತ್ಸೆಯ ನಂತರ ಗಿರಿಜಾ ಪತಿಯೊಡನೆ ಹುಬ್ಬಳ್ಳಿಗೆ ಹಿಂತಿರುಗಿದರು. ಚಿಕಿತ್ಸೆಯ ಪರಿಣಾಮವಾದ ನಿಶ್ಶಕ್ತಿ ಇನ್ನೂ ಇದ್ದಿತು. ಅಮ್ಮ ನೋಡಲು ತೆಳ್ಳಗಾಗಿರುವುದನ್ನು ಮಕ್ಕಳು ಗುರುತಿಸಿದರು. ತಮ್ಮ ತಾಯಿಗೆ ಕ್ಯಾನ್ಸರ್ ಆಗಿತ್ತೆಂದು ಸುವಾಸಿನಿಗೂ ನಂದಕುಮಾರನಿಗೂ ಆಗಲೇ ಗೊತ್ತಾಗಿದ್ದು. ಆದರೆ, ತನಗೊದಗಿದ ಕಷ್ಟವನ್ನು ಗಿರಿಜಾ ಧೈರ್ಯವಾಗಿ ಎದುರಿಸಿದರು. ದಿನನಿತ್ಯದ ಕರ್ತವ್ಯಗಳಲ್ಲಿ ಯಾವ ಬದಲಾವಣೆಯನ್ನೂ ತೋರ್ಪಡಿಸಲಿಲ್ಲ. ತಮ್ಮ ಇಲ್ಲವೇ ತಮ್ಮ ಕುಟುಂಬದ ಮೇಲಾಗಲಿ, ತಮ್ಮ ಸಾಮಾಜಿಕ ಚಟುವಟಿಕೆಗಳ ಮೇಲಾಗಲಿ ಯಾವುದೇ ಪರಿಣಾಮವಾಗದಂತೆ ಸಾಮಾನ್ಯಸ್ಥಿತಿಯಲ್ಲಿರುವಂತೆಯೇ ವರ್ತಿಸಿದರು. ಮನಸ್ಥೈರ್ಯವೊಂದಿದ್ದರೆ ಯಾವ ಅಪಾಯವನ್ನಾದರೂ ಎದುರಿಸಿ ಗೆಲ್ಲಬಹುದು ಎಂಬುದಕ್ಕೆ ಗಿರಿಜಾ ಶಾಸ್ತ್ರಿಯವರ ಬದುಕು ಒಂದು ನಿದರ್ಶನ. ಇದನ್ನು ಉಳಿದವರು ಹೇಳುವುದಿರಲಿ, ಗಿರಿಜಾ ಶಾಸ್ತ್ರಿಯವರೇ ಕ್ಯಾನ್ಸರ್ ರೋಗಕ್ಕೆ ತುತ್ತಾದ ಅನೇಕರಿಗೆ ಸಾಂತ್ವನ ಹೇಳುತ್ತಿದ್ದುದು ಹೀಗೆ:

"ನೀವೇನೂ ಹೆದರಬೇಡಿ. ಇದೇನೂ ಭೀಕರ ಖಾಯಿಲೆ ಅಲ್ಲ, ಇಗೋ ನೋಡಿ, ನಾನೇ ಈ ರೋಗಕ್ಕೆ ಗುರಿಯಾಗಿದ್ದರೂ ಬದುಕಿದ್ದೇನೆ. ಚೆನ್ನಾಗಿ ಓಡಾಡಿಕೊಂಡಿದ್ದೇನೆ. ನೀವೂ ಬದುಕುತ್ತೀರ. ಆದರೆ, ಧೈರ್ಯವಾಗಿರಿ. ಯಾವ ಖಾಯಿಲೆಯೂ ನಿಮ್ಮನ್ನು ಏನೂ ಮಾಡಲಾರದು !"

******************

ಲ್ಯಾಮಿಂಗ್ಟನ್ ಪ್ರೌಢಶಾಲೆಗೆ ಸೇರುವ ಹೊತ್ತಿಗೆ ಅನಂತಕುಮಾರನ ದೈಹಿಕ ಬೆಳವಣಿಗೆಯೊಡನೆ ವಿಚಾರಶಕ್ತಿಯೂ ಹೆಚ್ಚತೊಡಗಿತ್ತು. ಎಳೆತನದ ತುಂಟತನ ಕಡಿಮೆಯಾಗುತ್ತ ಗಾಂಭೀರ್ಯ ತೋರತೊಡಗಿತ್ತು. ಕೆಂಪಗೆ ದೃಢಕಾಯನಾಗಿ ಕಾಣುತ್ತಿದ್ದ ಅನಂತಕುಮಾರ ತನ್ನ ತರಗತಿಯ ಎಲ್ಲ ವಿದ್ಯಾರ್ಥಿಗಳಿಗಿಂತ ಎತ್ತರವಾಗಿದ್ದ. ಐದು ಅಡಿ ಹತ್ತು ಇಂಚಿನ ಹುಡುಗನನ್ನು ಎಲ್ಲಿದ್ದರೂ ಗುರುತಿಸಬಹುದಾಗಿತ್ತು. ಅವನಿಗೆ ಕ್ರಿಕೆಟ್ ಆಟವೆಂದರೆ ಬಲು ಇಷ್ಟ. ಜೊತೆಗೆ ಚೆಸ್ ಆಡುವುದರಲ್ಲೂ ಆಸಕ್ತಿ. ಗ್ರಂಥಭಂಡಾರಕ್ಕೆ ಹೋಗಿ ಪುಸ್ತಕಗಳನ್ನು ಓದುವುದರಲ್ಲಂತೂ ಎಲ್ಲಿಲ್ಲದ ತಲ್ಲೀನತೆ. ಶ್ರೀಮತಿ ಗಾರ್ಗಿ, ಶ್ರೀ ಪುರಂದರೆ ಮೊದಲಾದವರು ಇಲ್ಲಿ ಅನಂತಕುಮಾರನ ಶಿಕ್ಷಕರಾಗಿದ್ದವರು. ಶ್ರೀ ಬಸವರಾಜ ಹೊರಟ್ಟಿಯವರು ಆಗ ಇದೇ ಲ್ಯಾಮಿಂಗ್ಟನ್ ಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿ ಕೆಲಕಾಲ ಕೆಲಸ ಮಾಡುತ್ತಿದ್ದರು.

ಮಕ್ಬೂಲ್ - ಅನಂತ ಇವರಿಬ್ಬರೂ ಜೊತೆಯಲ್ಲೇ ಬೆಳೆದರೂ ಒಟ್ಟಿಗೇ ಆಟವಾಡುತ್ತಿದ್ದರೂ ಎಂದೂ ಒಟ್ಟಿಗೆ ಕುಳಿತು ಓದಲಿಲ್ಲ. ಆದರೆ, ಓದುವುದು ಎಂದರೆ ಪಠ್ಯಪುಸ್ತಕ ಮಾತ್ರವೆಂದು ಭಾವಿಸಿದ್ದ ಮಕ್ಬೂಲ್ ಪಟೇಲನಿಗೆ ಓದಿನ ವಿಸ್ತಾರವನ್ನು ಮೊದಲಿಗೆ ತೋರಿಸಿಕೊಟ್ಟದ್ದು ಅನಂತಕುಮಾರನೇ. ಇವರು ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ಓದುತ್ತಿದ್ದ ಕಾಲ. ಒಂದು ದಿನ ಅನಂತ ಪುಸ್ತಕವೊಂದನ್ನು ತಂದು ಮಕ್ಬೂಲನ ಕೈಗೆ ಕೊಟ್ಟ. ಎಮ್. ಸಿ. ಛಾಗ್ಲಾ ಬರೆದ 'ರೋಸ್ ಇನ್ ಡಿಸೆಂಬರ್' ಎಂಬ ಪುಸ್ತಕ ಅದು. ಅದನ್ನೇನು ಮಾಡಬೇಕೆಂದು ತಿಳಿಯದೆ ಮಕ್ಬೂಲ್ ಪುಟ ಮೊಗುಚುತ್ತಿದ್ದಾಗ ಅನಂತ "ಈ ಪುಸ್ತಕವನ್ನು ನಾನು ಓದಿದ್ದೇನೆ. ನೀನೂ ಇದನ್ನು ಓದಬೇಕು. ಓದಿ ನೋಡು" ಎಂದ.

ಮಕ್ಬೂಲನಿಗೆ ಆಶ್ಚರ್ಯವಾಯಿತು. ಶಾಲೆಗೆ ಸಂಬಂಧಪಡದ ಪುಸ್ತಕವನ್ನು ಅವನು ಓದುವುದಿರಲಿ, ನೋಡಿದ್ದೇ ಅದೇ ಮೊದಲು. ಅನಂತನ ಒತ್ತಾಯಕ್ಕೆ ಆ ಪುಸ್ತಕವನ್ನು ಅವನು ಓದಿದ್ದೂ ಆಯಿತು. ಅನಂತಕುಮಾರ್ ಅಂತಹ ಅನೇಕ ಪುಸ್ತಕಗಳನ್ನು ಓದುವ ಹವ್ಯಾಸವುಳ್ಳವನೆಂಬುದು ಮಕ್ಬೂಲನಿಗೆ ತಿಳಿದದ್ದೂ ಆಗಲೇ. ಅಂದು ಪ್ರಾರಂಭವಾದ ಅವರ ಪುಸ್ತಕಸಂಬಂಧ ಬಹುಕಾಲ ಮುಂದುವರಿಯಿತು. ಮುಂದೆ ಮಕ್ಬೂಲ್ ಪಟೇಲ್ ತಾವು ಅಮೇರಿಕೆಯಿಂದ ಬರುವಾಗ ಅನಂತಕುಮಾರರಿಗೆ ಕೆಲವು ಪುಸ್ತಕಗಳನ್ನು ತಂದುಕೊಡುತ್ತಿದ್ದರು. ಅನಂತಕುಮಾರ್ ಬಿಡುವಿಲ್ಲದ ತಮ್ಮ ಕಾರ್ಯಕ್ರಮಗಳ ನಡುವೆ ಆ ಪುಸ್ತಕಗಳನ್ನು ಓದುವುದಲ್ಲದೆ, ಮಕ್ಬೂಲ್ ಇನ್ನೊಮ್ಮೆ ಭೇಟಿಯಾಗುವಾಗ ಪುಸ್ತಕಗಳ ವಿಷಯವಾಗಿ ಚರ್ಚಿಸುತ್ತಿದ್ದುದೂ ಉಂಟು.

ಮುಂದುವರಿಯುವುದು

ಪುಟ 1 ರಿಂದ

# ಕಾರ್ಮಿಕ ಹೋರಾಟಗಳಿಗೆ ನವೀನ ಆಯಾಮ

"ಅನಂತಕುಮಾರರ ಸಂಪರ್ಕದಿಂದ ನಮ್ಮ ಸಂಘದಲ್ಲಿ ಭವಿಷ್ಯದ ಭರವಸೆ ಮೂಡಿತು. ೧೯೮೭ರಲ್ಲಿ ಶೇ ೬ಕ್ಕೆ ಕುಸಿದಿದ್ದ ನಮ್ಮ ಸದಸ್ಯತ್ವ ಮುಂದಿನ ಮೂವತ್ತು ವರ್ಷಗಳಲ್ಲಿ ಶೇ ೪೫ಕ್ಕೇರಿತು. ಅವರ ಹೆಸರಿನ ಬಲದಿಂದಲೇ ನಾವು ಅನೇಕ ಸಾಧನೆಗಳನ್ನು ಮಾಡಿದೆವು" ಎಂದು ಅನಂತಪಥ ಪತ್ರಿಕೆಯ ಜೊತೆ ಮಾತನಾಡುತ್ತ ಬ್ಯಾಂಕ್ ಆಫ್ ಬರೋಡ ಎಂಪ್ಲಾಯೀಸ್ ಸಂಘದ ಅಧ್ಯಕ್ಷರಾಗಿರುವ ಶ್ರೀ ರಾಮಕೃಷ್ಣ ಪೂಂಜಾರವರು ಹೇಳಿಕೊಂಡಿರುವುದು ಕಾರ್ಮಿಕ ಸಂಘಟನೆಗೆ ಅನಂತಕುಮಾರರ ಕೊಡುಗೆಗೆ ಸಾಕ್ಷಿ.

"ನಮ್ಮ ರಾಷ್ಟ್ರೀಯ ಸಂಘಟನೆಯಾದ ನ್ಯಾಷನಲ್ ಆರ್ಗನೈಸೇಷನ್ ಆಫ್ ಬ್ಯಾಂಕ್ ವರ್ಕರ್ಸ್ ಸಂಸ್ಥೆಗೆ ದ್ವಿಪಕ್ಷೀಯ ಒಪ್ಪಂದಗಳಿಗೆ ಸಹಿ ಹಾಕುವ ಅವಕಾಶವನ್ನು ಬಹುಕಾಲ ನಿರಾಕರಿಸಲಾಗಿತ್ತು. ಅನಂತಕುಮಾರರ ಪರಿಶ್ರಮದಿಂದ ಹದಿನಾಲ್ಕು ವರ್ಷಗಳ ನಂತರ ಎಂಟನೆಯ ದ್ವಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕುವುದು ಸಾಧ್ಯವಾಯಿತು. ಆ ಸಂದರ್ಭದಲ್ಲಿ ಭಾರತೀಯ ಬ್ಯಾಂಕರುಗಳ ಸಂಘವು ವೇತನ ಪರಿಷ್ಕರಣದ ಬಗ್ಗೆ ಕಠಿಣ ನಿಲುವನ್ನು ತಳೆದಿತ್ತು. ಅನಂತಕುಮಾರರು ಸರಕಾರದಿಂದ ಬ್ಯಾಂಕರುಗಳ ಸಂಘಕ್ಕೆ ಸೂಕ್ತ ನಿರ್ದೇಶನ ಕೊಡಿಸಿ ಒಪ್ಪಂದವು ಸುಗಮವಾಗಿ ಅಂತಿಮಗೊಳ್ಳಲು ನೆರವಾಗಿದ್ದರು" ಎಂದು ಶ್ರೀ ಪೂಂಜಾ ಅಂದು ನೆನಪಿಸಿಕೊಂಡಿದ್ದರು.

ಭಾರತೀಯ ಸಾರ್ವಜನಿಕ ಸಂಸ್ಥೆಗಳ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಮುಚ್ಚಲ್ಪಟ್ಟ ಸಾರ್ವಜನಿಕ ಉದ್ಯಮವೊಂದು ತನ್ನ ಕೆಲಸಗಾರರಿಗೆ ಅವರಿದ್ದ ಮನೆಗಳನ್ನು ರಿಯಾಯಿತಿ ದರದಲ್ಲಿ ಬಿಟ್ಟುಕೊಟ್ಟು ಹಕ್ಕುಪತ್ರ ನೀಡಿತು. ಕೆಜಿಎಫ್ ನಲ್ಲಿರುವ ಭಾರತ ಚಿನ್ನದ ಗಣಿ ಸಂಸ್ಥೆ(BGML)ಯನ್ನು ೨೦೦೧ರ ಫೆಬ್ರವರಿಯಲ್ಲಿ ಮುಚ್ಚಲಾಯಿತು. ಇದರಿಂದ ಸುಮಾರು ೧೯೦೦ ಕುಟುಂಬಗಳು ಅತಂತ್ರವಾದವು. ಅವರಿಗೆ ಬರಬೇಕಿದ್ದ ೫೨ ಕೋಟಿ ರೂಪಾಯಿ ವೇತನಬಾಕಿ ಹಾಗೂ ೧೧ ಕೋಟಿ ರೂಪಾಯಿ ಉಪಾದಾನ ಮೊತ್ತಕ್ಕಾಗಿ ಕಾರ್ಮಿಕರು ನ್ಯಾಯಾಲಯದ ಮೊರೆ ಹೋಗಿದ್ದರು. ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ ಸುಮಾರು ೧೨೫೦೦ ಎಕರೆಯಷ್ಟು ಪ್ರದೇಶದಲ್ಲಿ ಅವರು ವಾಸವಾಗಿದ್ದ ಮನೆಗಳನ್ನು ಅವರಿಗೆ ರಿಯಾಯಿತಿ ದರದಲ್ಲಿ ನೀಡುವಂತೆ ಶ್ರೀ ಅನಂತಕುಮಾರರು ಆಗ್ರಹಿಸಿದ್ದರು. ಇದರಿಂದಾಗಿ ಸುಮಾರು ೧೯೦೦ ಕುಟುಂಬಗಳು ಮನೆಗಳನ್ನು ಹೊಂದುವಂತಾಯಿತು. ಮೂಲಸೌಕರ್ಯಗಳಿಂದ ವಂಚಿತವಾಗಿದ್ದ ಈ ನಿವಾಸಗಳಿಗೆ ಕೆಲವು ಸೌಲಭ್ಯಗಳನ್ನೂ ಈಗ ಒದಗಿಸಲಾಗಿದೆ.

ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಅಧಿಕಾರಿಗಳ ಸಂಘದ ಬೆಂಗಳೂರು ನಗರ ವಿಭಾಗದ ಅಧ್ಯಕ್ಷರಾದ ಶ್ರೀ ಎ. ಮುರಳೀಧರರು ಸಾರ್ವಜನಿಕ ವಿಮಾ ವಲಯದ ೪೦೦೦೦ ಉದ್ಯೋಗಿಗಳ ನಿವೃತ್ತಿವೇತನ ಸೌಲಭ್ಯವನ್ನು ಆಯ್ಕೆ ಮಾಡಿಕೊಳ್ಳುವ ಮರುಅವಕಾಶದ ಬೇಡಿಕೆಗೆ ಅನಂತಕುಮಾರ್ ನೀಡಿದ ಬೆಂಬಲವನ್ನು ಸ್ಮರಿಸಿಕೊಳ್ಳುತ್ತಾರೆ. ವಿಮಾಕ್ಷೇತ್ರದಲ್ಲಿ ನಿವೃತ್ತಿವೇತನ ಯೋಜನೆಯು ೧೯೯೫ರಲ್ಲಿ ಜಾರಿಗೆ ಬಂದಿತು. ಆಗ ಭವಿಷ್ಯನಿಧಿ ಮತ್ತು ಬ್ಯಾಂಕ್ ಠೇವಣಿಗಳ ಮೇಲೆ ಆಕರ್ಷಕ ಬಡ್ಡಿ ದೊರೆಯುತ್ತಿದ್ದುದರಿಂದ ಅನೇಕ ಉದ್ಯೋಗಿಗಳು ನಿವೃತ್ತಿವೇತನ ಸೌಲಭ್ಯವನ್ನು ಆಯ್ಕೆ ಮಾಡಿಕೊಳ್ಳಲಿಲ್ಲ. ಆದರೆ ಕ್ರಮೇಣ ಭವಿಷ್ಯನಿಧಿ ಮತ್ತು ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿ ತೀವ್ರವಾಗಿ ಇಳಿಮುಖವಾಯಿತು. ಸಹಜವಾಗಿಯೇ ಕಾರ್ಮಿಕರು ನಿವೃತ್ತಿವೇತನವನ್ನು ಆಯ್ಕೆಮಾಡಿಕೊಳ್ಳಲು ಮರುಅವಕಾಶವನ್ನು ಕೇಳತೊಡಗಿದರು. ದೀರ್ಘಕಾಲದ ಹೋರಾಟದ ನಂತರ ೨೦೧೨ರಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಂಡರೂ ಕೆಲವು ಗೊಂದಲಗಳ ಕಾರಣದಿಂದ ಅದು ನೆನೆಗುದಿಗೆ ಬಿದ್ದಿತು. ೨೦೧೫ರ ನಂತರ ಮುರಳೀಧರರ ನೇತೃತ್ವದಲ್ಲಿ ಈ ಸಮಸ್ಯೆಯನ್ನು ಅನಂತಕುಮಾರರ ಗಮನಕ್ಕೆ ತರಲಾಯಿತು. ಕಾರ್ಮಿಕರ ನ್ಯಾಯಯುತ ಬೇಡಿಕೆಗಳ ಹಿಂದಿನ ತರ್ಕವನ್ನು ತತ್ಕ್ಷಣದಲ್ಲಿ ಗ್ರಹಿಸಿದ ಅನಂತಕುಮಾರ್, ವಿಷಯವನ್ನು ಅಂದಿನ ಹಣಕಾಸು ಸಚಿವ, ಅರುಣ್ ಜೇಟ್ಲಿಯವರ ಗಮನಕ್ಕೆ ತಂದರು. ಈ ಸಮಸ್ಯೆಯನ್ನು ಹಿಡಿದುಕೊಂಡು ಕನಿಷ್ಠ ೧೨ ಸಲವಾದರೂ ಮುರಳೀಧರರ ತಂಡ ದೆಹಲಿ ಯಾತ್ರೆ ಕೈಗೊಂಡಿತ್ತು. ಪ್ರತಿಬಾರಿಯೂ ಅನಂತಕುಮಾರರ ಮನೆಯಲ್ಲಿಯೇ ವಾಸ್ತವ್ಯ ಮತ್ತು ಊಟದ ವ್ಯವಸ್ಥೆ.

"೨೦೧೮ರಲ್ಲಿ ಸಂಸತ್ ಅಧಿವೇಶನ ನಡೆಯುತ್ತಿದ್ದಾಗ ನಾವು ದೆಹಲಿಗೆ ಹೋಗಿ ಅವರನ್ನು ನೋಡಿದಾಗ ಅವರ ಆರೋಗ್ಯ ಹದಗೆಟ್ಟಿತ್ತು, ಆದರೆ ನಮಗೆ ಅದರ ಸುಳಿವೂ ಇರಲಿಲ್ಲ. ಅಂತಹ ಸಂದರ್ಭದಲ್ಲಿಯೂ ನಮ್ಮನ್ನು ಅರುಣ್ ಜೇಟ್ಲಿಯವರಿಗೆ ಭೇಟಿ ಮಾಡಿಸಿದ್ದಲ್ಲದೆ ಅಂದಿನ ಆರ್ಥಿಕ ಸೇವೆಗಳ ನಿರ್ದೇಶಕ (DFS)ರಿಗೆ ವೈಯಕ್ತಿಕವಾಗಿ ಕರೆಮಾಡಿ ನಮ್ಮ ಸಮಸ್ಯೆಯನ್ನು ಶೀಘ್ರವಾಗಿ ಬಗೆಹರಿಸುವಂತೆ ಆದೇಶ ನೀಡಿದ್ದರು" ಎಂದು ಶ್ರೀ ಮುರಳೀಧರ



ನೆನಪಿಸಿಕೊಳ್ಳುತ್ತಾರೆ. ಬೆಂಗಳೂರು ಗಾರ್ಮೆಂಟ್ ಕಾರ್ಖಾನೆಗಳ ನೌಕರರು ಹೆಚ್ಚುವರಿ ಕೆಲಸದ ಭತ್ಯೆ, ಇಪಿಎಫ್ ಮತ್ತು ಟಿಯುಎಫ್ ಸೌಲಭ್ಯಗಳಲ್ಲಿ ಸುಧಾರಣೆಗಾಗಿ ನಡೆಸಿದ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ ಅನಂತಕುಮಾರ್, ಈ ಸಮಸ್ಯೆಗಳ ಪರಿಹಾರಕ್ಕಾಗಿ ೨೦೧೬ರಲ್ಲಿ ಕರ್ನಾಟಕ ರಾಜ್ಯಕ್ಕೆ ೬೦೦೦ ಕೋಟಿ ರೂಪಾಯಿಗಳ 'ಜವಳಿ ಮತ್ತು ಉಡುಪು ಪ್ಯಾಕೇಜ್' ಕೂಡ ದೊರಕಿಸಿಕೊಟ್ಟಿದ್ದರು. ಜೊತೆಗೆ, ಬೊಮ್ಮನಹಳ್ಳಿಯಲ್ಲಿ ಹೊಸ ಇಎಸ್ಐ ಆಸ್ಪತ್ರೆಗೆ ಅನುಮೋದನೆ ಮತ್ತು ಕಾರ್ಮಿಕರ ಹಿತರಕ್ಷಣೆಯ ಹಲವು ಉಪಕ್ರಮಗಳ ಹಿಂದೆ ಅವರ ಪ್ರಭಾವವಿತ್ತು.

ಅನಂತಕುಮಾರರ ಕಾರ್ಮಿಕ ಕಾಳಜಿ ಆಡಳಿತವರ್ಗದ ಹಿತಾಸಕ್ತಿಗೆ ಮಾರಕವಾಗಿರುತ್ತಿರಲಿಲ್ಲ. ಒಮ್ಮೆ, ವಿಜಯಾಬ್ಯಾಂಕಿನ ಆಡಳಿತವರ್ಗದ ಜೊತೆ ಮಾತುಕತೆಯಲ್ಲಿ ನಿರತರಾಗಿದ್ದಾಗ ಬ್ಯಾಂಕಿಗೆ ತುರ್ತಾಗಿ ಅಗತ್ಯವಿದ್ದ 2000 ಕೋಟಿ ರೂಪಾಯಿಗಳ ಪ್ರಸ್ತಾಪವನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿರುವುದಾಗಿಯೂ, ಕೇಂದ್ರದಿಂದ ಈ ಬಗ್ಗೆ ಯಾವ ಪ್ರತಿಕ್ರಿಯೆಯೂ ದೊರೆತಿಲ್ಲ ಎಂದೂ ಬ್ಯಾಂಕಿನ ಅಧ್ಯಕ್ಷರು ತಿಳಿಸಿದರು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಅನಂತಕುಮಾರರು ಕೇವಲ 48 ಗಂಟೆಗಳಲ್ಲಿ ಆ 2000 ಕೋಟಿ ರೂಪಾಯಿಗಳ ಬಂಡವಾಳವನ್ನು ಮಂಜೂರು ಮಾಡಿಸಿದರು.

ಅವರು ನಾಗರಿಕ ವಿಮಾನಯಾನ ಖಾತೆಯ ಸಚಿವರಾಗಿದ್ದಾಗ ವಿಮಾನ ನಿಲ್ದಾಣಗಳಲ್ಲಿ ಕೆಲಸ ಮಾಡುತ್ತಿದ್ದ ಎಟಿಸಿ ನೌಕರರು ಈಡೇರಿಸಲಾಗದ ಬೇಡಿಕೆಗಳನ್ನಿರಿಸಿಕೊಂಡು ಮುಷ್ಕರ ಹೂಡಿದರು. ತಮ್ಮದು ಅಗತ್ಯ, ಅನಿವಾರ್ಯ ಸೇವೆಯಾಗಿರುವುದರಿಂದ ತಮ್ಮ ಬೇಡಿಕೆಗಳನ್ನು ಈಡೇರಿಸುವುದು ಖಚಿತ ಎಂದು ನೌಕರರು ನಂಬಿಕೊಂಡಿದ್ದರು. ಆ ಎಲ್ಲ ಬೇಡಿಕೆಗಳನ್ನು ಈಡೇರಿಸಿದ್ದರೆ ಸರಕಾರಕ್ಕೆ ಮತ್ತು ವಿಮಾನಯಾನ ಕಂಪೆನಿಗಳಿಗೆ ಅಗಾಧ ನಷ್ಟವುಂಟಾಗುವ ಸಂಭವವಿತ್ತು. ಇಂತಹ ಸಮಯದಲ್ಲಿ ಅಸಾಧಾರಣ ಧೈರ್ಯ ತೋರಿದ ಅನಂತಕುಮಾರ್ ಮುಷ್ಕರನಿರತ ಎಲ್ಲ ನೌಕರರನ್ನು ವಜಾಗೊಳಿಸಿ ಅವರ ಜಾಗಕ್ಕೆ ವಾಯುಪಡೆಯ ಸಿಬ್ಬಂದಿಯನ್ನು ನಿಯೋಜಿಸುವ ಘೋಷಣೆ ಮಾಡಿದರು. ಸರಕಾರದ ಈ ಕಠಿಣ ನಿಲುವಿಗೆ ಬೆದರಿದ ಕಾರ್ಮಿಕರು ತಮ್ಮ ಸಮರ್ಥನೀಯವಲ್ಲದ ಮುಷ್ಕರವನ್ನು ಕೈಬಿಟ್ಟಿದ್ದರು.

ಅನಂತಕುಮಾರ್ ಮತ್ತು ಕಾರ್ಮಿಕ ಸಂಘಟನೆಗಳ ಸಂಬಂಧ ಏಕಮುಖವಾಗಿರಲಿಲ್ಲ. ಚುನಾವಣೆಗಳ ಸಂದರ್ಭದಲ್ಲಿ ಸಂಘಟನೆಯ ಪದಾಧಿಕಾರಿಗಳು ಭಾರತೀಯ ಜನತಾ ಪಕ್ಷದ ಪರವಾಗಿ ವೈಯಕ್ತಿಕವಾಗಿ ಪ್ರಚಾರದಲ್ಲಿ ಭಾಗವಹಿಸುವುದರ ಜೊತೆಗೆ ಸಾಮೂಹಿಕವಾಗಿ ಒಂದೆರಡು ವಾರ್ಡುಗಳನ್ನು ಕೇಂದ್ರವಾಗಿರಿಸಿಕೊಂಡು ಪ್ರಚಾರ ಮಾಡುತ್ತಿದ್ದರು. ಬ್ಯಾಂಕ್ ಉದ್ಯೋಗಿಗಳ ಚುನಾವಣಾ ಸಭೆಯನ್ನು ಏರ್ಪಡಿಸಿ ಅನಂತಕುಮಾರ್ ಮುಂತಾದ ನಾಯಕರಿಂದ ಭಾಷಣಗಳನ್ನು ಏರ್ಪಡಿಸುತ್ತಿದ್ದರು. ಸುಮಾರು ೫೦೦-೬೦೦ ಜನರು ಭಾಗವಹಿಸುತ್ತಿದ್ದ ಈ ಸಭೆಗಳು ಚಿಂತನಾಶಿಬಿರದಂತೆ ಇದ್ದು ಭಾಗವಹಿಸಿದವರೆಲ್ಲರೂ ಮತದಾನದ ಮಹತ್ವವನ್ನು ನಾಗರಿಕರಿಗೆ ವಿವರಿಸಿಹೇಳುವುದು ತಮ್ಮ ಕರ್ತವ್ಯ ಎಂದು ಭಾವಿಸಿಕೊಳ್ಳುತ್ತಿದ್ದರು. ಎರಡು ಹಂತಗಳಲ್ಲಿ ಚುನಾವಣೆ ನಡೆಯಲು ಪ್ರಾರಂಭವಾದ ಮೇಲೆ ಬೆಂಗಳೂರಿನಲ್ಲಿ ಪ್ರಚಾರ ಕಾರ್ಯ ನಿರ್ವಹಿಸಿ ತಮ್ಮ ತಮ್ಮ ಊರುಗಳಲ್ಲಿ ಮತದಾನ ಮಾಡುವ ಶ್ರದ್ಧೆಯನ್ನು ಬೆಳೆಸಿಕೊಂಡರು.

ಬೆಂಗಳೂರಿನಲ್ಲಿ ಪದವೀಧರ ಕ್ಷೇತ್ರದ ಚುನಾವಣೆಯ ಪೂರ್ವದಲ್ಲಿ ಮತದಾರರನ್ನು ನೋಂದಾಯಿಸುವುದು ಮತ್ತು ಕರಪತ್ರಗಳ ಮೂಲಕ ವ್ಯಾಪಕವಾಗಿ ಪ್ರಚಾರ ಮಾಡುವುದರ ಹಿಂದೆ ಅನಂತಕುಮಾರರ ಸ್ನೇಹ ಮತ್ತು ವಿಶ್ವಾಸಗಳೂ ಕೆಲಸ ಮಾಡಿದ್ದವು ಎಂದರೆ ತಪ್ಪಲ್ಲ. ಒಟ್ಟಾರೆಯಾಗಿ ಗಮನಿಸುವುದಾದರೆ ಅನಂತಕುಮಾರರು ಕಾರ್ಮಿಕ ಚಟುವಟಿಕೆಗಳಿಗೆ ಹೊಸ ಮಾರ್ಗವನ್ನು ತೋರಿಸಿದರು. ಜೊತೆಗೆ, ಸ್ವಹಿತಕ್ಕಿಂತ ರಾಷ್ಟ್ರಹಿತವನ್ನು ಪ್ರಮುಖವಾಗಿ ಪರಿಗಣಿಸಬೇಕೆಂಬ ಸಂದೇಶವನ್ನೂ ತಮ್ಮ ನಡೆಗಳ ಮೂಲಕ ತೋರಿದರು. ◆

# ಯಶಸ್ಸಿನ ಹಾದಿ ತೋರಿದ ಅನಂತಕುಮಾರ್

"ನಾನು ಇಂತಹ ಸಾಧನೆ ಮಾಡುತ್ತೇನೆ, ಅಂತಹ ಎತ್ತರವನ್ನು ಏರುತ್ತೇನೆ ಎಂದು ಮನಸ್ಸಿನಲ್ಲಿ ಇಟ್ಟುಕೊಳ್ಳದೆ ನೀವು ಕೆಲಸ ಮಾಡಿಕೊಳ್ಳುತ್ತ ಹೋಗಿ. ನೀವು ಏನಾಗಬೇಕು ಎಂದು ಜನರೇ ಕಲಿಸಿಕೊಡುತ್ತಾರೆ. ತಮಗೆ ನೀಡಿದ ಜವಾಬ್ದಾರಿಯನ್ನು ಪೂರ್ಣಗೊಳಿಸುವವರೆಗೆ ಯಶಸ್ಸು ದೊರೆಯುವುದು ಖಂಡಿತ. ತನಗೆ ಸಿಕ್ಕಿದ್ದು ಸಣ್ಣ ಜವಾಬ್ದಾರಿ ಎಂದು ನಿರ್ಲಕ್ಷ್ಯ ಮಾಡಿದರೆ ನಿಮಗೆ ದೊಡ್ಡ ಜವಾಬ್ದಾರಿಗಳು ಎಂದಿಗೂ ಸಿಗಲಾರವು" - ಇದು ನನ್ನಂತಹ ಅನೇಕ ಕಾರ್ಯಕರ್ತರಿಗೆ ಅನಂತಕುಮಾರರು ನೀಡಿದ ಸಂದೇಶವಾಗಿತ್ತು. ನುಡಿದಂತೆ ಬದುಕಿದ ಅನಂತಕುಮಾರರು ಇಂದಿಗೂ ನಮಗೆಲ್ಲ ಪ್ರೇರಣಾಸ್ರೋತವಾಗಿದ್ದಾರೆ.

೧೯೯೦ರಲ್ಲಿ ರಾಮಮಂದಿರ ಚಳವಳಿ ನಡೆಯುತ್ತಿದ್ದಾಗ, ಎಲ್. ಕೆ. ಅದ್ವಾನಿಯವರ ರಥಯಾತ್ರೆಯ ಸಂದರ್ಭದಲ್ಲಿ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಭಾರತೀಯ ಜನತಾ ಪಕ್ಷವನ್ನು ನಾನು ಸೇರಿದ್ದೆ. ಆಗ ನಾನು ಸಂಘದ ಕಾರ್ಯಕರ್ತನಾಗಿರಲಿಲ್ಲ. ಸಂಘದ ಸಂಪರ್ಕ ನನಗೆ ಮೊದಲು ದೊರೆತದ್ದು ೧೯೯೬ರಲ್ಲಿ, ಹಗರಿಬೊಮ್ಮನಹಳ್ಳಿಯ ಐಟಿಸಿಯಲ್ಲಿ. ಅನಂತಕುಮಾರರು ನನಗೆ ಪರಿಚಯವಾದದ್ದೂ ಅಲ್ಲಿಯೇ.

ಅನಂತಕುಮಾರರಿಗೆ ಹತ್ತಿರದವರಾದ ಸ್ವರ್ಗೀಯ ರಾಜೇಂದ್ರ ಗೋಖಲೆ, ಡಾ. ಎಂ. ಆರ್. ತಂಗಾ, ಬಸವರಾಜ ಪಾಟೀಲ್ ಸೇಡಂ, ವಿಶ್ವೇಶ್ವರ ಹೆಗಡೆ ಆಗಾಗ ನಮ್ಮ ಕಾರ್ಯಕ್ಷೇತ್ರಕ್ಕೆ ಬರುತ್ತಿದ್ದರು. ಗೋಖಲೆಯವರು ನಮ್ಮ ಕಾರ್ಯವನ್ನು ನೋಡಿ ಅನಂತಕುಮಾರರಿಗೆ ನನ್ನ ಬಗ್ಗೆ ಒಳ್ಳೆಯ ಮಾಹಿತಿ ನೀಡಿದ್ದರು. ಹೀಗಾಗಿ, ೧೯೯೯ರಲ್ಲಿ ಮೊದಲು ಹಿರೇಬಾಗೇವಾಡಿ ಕ್ಷೇತ್ರದಿಂದ ನಂತರ ಬೆಳಗಾವಿ ದಕ್ಷಿಣ ಕೇಂದ್ರದಿಂದ ವಿಧಾನಸಭೆಗೆ ಸ್ಪರ್ಧಿಸುವ ಅವಕಾಶವನ್ನು ಅನಂತಕುಮಾರ್ ನನಗೆ ನೀಡಿದರು. ೨೦೧೮ರ ವರೆಗಿನ ಎಲ್ಲ ಚುನಾವಣೆಗಳಲ್ಲಿ ನನಗೆ ಸ್ಪರ್ಧಿಸಲು ಅವಕಾಶ ದೊರೆಯಲು ಅನಂತಕುಮಾರರೇ ಕಾರಣ.




೧೯೯೯ರ ಚುನಾವಣೆಯಲ್ಲಿ ನಾನು ಸೋಲಬೇಕಾಯಿತು. ೨೦೦೪ರಲ್ಲಿ ಮರಳಿ ಸ್ಪರ್ಧಿಸುವ ನನ್ನ ಇರಾದೆಯನ್ನು ಅಂದಿನ ಲೋಕಸಭಾ ಅಭ್ಯರ್ಥಿಯು ವಿರೋಧಿಸಿದ್ದರು. ಅವರು ನನ್ನ ವಿರುದ್ಧವಾಗಿ ಭಾರೀ ಒತ್ತಡ ಹೇರಿದ್ದರೂ ಅನಂತಕುಮಾರರ ವಿಶ್ವಾಸ ನನ್ನ ಮೇಲೆಯೇ ಇದ್ದಿತು. ಹೀಗಾಗಿ ಮತ್ತೆ ಸ್ಪರ್ಧಿಸಿದ ನಾನು ಪ್ರಥಮಬಾರಿಗೆ ಶಾಸಕನಾಗಿ ಆಯ್ಕೆಯಾದೆ. ೨೦೦೫ರಲ್ಲಿ ಅರವಿಂದ ಲಿಂಬಾವಳಿಯ ಮೂಲಕ ನನ್ನನ್ನು ಸಂಪರ್ಕಿಸಿದ ಅನಂತಕುಮಾರ್ ನನಗೆ ದೊಡ್ಡ ಜವಾಬ್ದಾರಿಯನ್ನೇ ವಹಿಸಲು ಮುಂದಾದರು. ನನಗೆ ಕನ್ನಡ, ಹಿಂದಿ ಮತ್ತು ಮರಾಠಿ ಭಾಷೆಗಳು ಬರುತ್ತಿದ್ದುದರಿಂದ ನನ್ನನ್ನು ಭಾರತೀಯ ಜನತಾ ಪಕ್ಷದ ಯುವ ಮೋರ್ಚಾದ ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದರು. ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಪೋಸ್ಟರ್ ಅಂಟಿಸುವುದು, ಘೋಷಣೆ ಕೂಗುವುದು, ಹಿರಿಯ ನಾಯಕರ ಸಭೆಗಳನ್ನು ಏರ್ಪಡಿಸುವುದು ಮುಂತಾದ ಸಣ್ಣಪುಟ್ಟ ಕೆಲಸಗಳನ್ನು ನಿಷ್ಠೆಯಿಂದ ಮಾಡುತ್ತಿದ್ದ ನನಗೆ ಹೀಗೊಂದು ಮಾನ್ಯತೆ ಲಭಿಸಿ, ರಾಷ್ಟ್ರೀಯ ಯುವ ಮೋರ್ಚಾದ ಉಪಾಧ್ಯಕ್ಷನಾಗುತ್ತೇನೆ ಎಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ.

ಅನಂತಕುಮಾರ್ ಗುಣಗ್ರಾಹಿಗಳು. ನನಗೂ ಅವರಿಗೂ ಅಂತಹ ನಿಕಟ ಸಂಪರ್ಕವೇನೂ ಇದ್ದಿರಲಿಲ್ಲ. ನನಗೆ ದೊಡ್ಡ ಜಾತಿಗಳ ಬೆಂಬಲವಿರಲಿಲ್ಲ. ನಮ್ಮ ಮನೆಯಲ್ಲಿ ಯಾರೂ ರಾಜಕಾರಣಿಗಳಾಗಿರಲಿಲ್ಲ. ಆದರೆ ನನ್ನಂತಹ ಸಾವಿರಾರು ಕಾರ್ಯಕರ್ತರ ಕೆಲಸವನ್ನು ಗುರುತಿಸುವ ಸಾಮರ್ಥ್ಯ ಅವರಲ್ಲಿತ್ತು. ಇಂದು ನನ್ನನ್ನು ಕಾರ್ಯಶೀಲನೆಂದೂ ನಾನೇನಾದರೂ ಸಮಾಜಮುಖಿಯಾದ ಕೆಲಸ ಮಾಡಿದ್ದೇನೆ ಎಂದೂ ಜನರು ಗುರುತಿಸುತ್ತಿದ್ದರೆ ಅದಕ್ಕೆ ಅನಂತಕುಮಾರರು ನೀಡಿದ ಪ್ರೇರಣೆಯೇ ಕಾರಣ. ನನ್ನಂತೆಯೇ ರಾಜ್ಯದಲ್ಲಿ ಪಕ್ಷದ ಶೇ. ೮೦ರಷ್ಟು ಶಾಸಕರನ್ನು ಅನಂತಕುಮಾರರೇ ಬೆಳೆಸಿದ್ದರು.

ರಾಜ್ಯ ವಿಧಾನಸಭೆಗೆ ೨೦೦೪ರಲ್ಲಿ ನಡೆದ ಚುನಾವಣೆ ನಮ್ಮ ಪಾಲಿಗೆ ಅವಿಸ್ಮರಣೀಯ. ಅದಕ್ಕೆ ಮುನ್ನ ೨೦೦೩ರಲ್ಲಿ ಕೇಂದ್ರ ಮಂಡಳಿಯು ನಡೆಸಿದ ಸಮೀಕ್ಷೆಯ ಪ್ರಕಾರ, ಪಕ್ಷವು ಕೇವಲ ನಾಲ್ಕು ಸ್ಥಾನಗಳನ್ನು ಗೆಲ್ಲುವ ಸಂಭವವಿದೆ ಎಂಬ ಸೂಚನೆ ಬಂದಿತ್ತು. ಬಹಳಷ್ಟು ಜನರು ಪಕ್ಷವನ್ನು ಬಿಟ್ಟುಹೋಗಿದ್ದರು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಕೇಂದ್ರದಲ್ಲಿ ಕ್ಯಾಬಿನೆಟ್ ದರ್ಜೆಯ ಸಚಿವರಾಗಿ ನೆಮ್ಮದಿಯ ಸ್ಥಾನದಲ್ಲಿದ್ದ ಅನಂತಕುಮಾರರನ್ನು ಪಕ್ಷದ ರಾಜ್ಯಾಧ್ಯಕ್ಷರಾಗಿ ಕಠಿಣ ಜವಾಬ್ದಾರಿ ವಹಿಸಿಕೊಳ್ಳುವಂತೆ ಅಟಲ್ ಮತ್ತು ಅದ್ವಾನಿ ಕೇಳಿಕೊಂಡರು. ಹಿರಿಯ ನಾಯಕರ ಆದೇಶವನ್ನು ಶಿರಸಾವಹಿಸಿ ರಾಜ್ಯಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಅನಂತಕುಮಾರ್ ಕರ್ನಾಟಕದಲ್ಲಿ ಚಮತ್ಕಾರವನ್ನೇ ಮಾಡಿದರು.



**ಅಭಯಕುಮಾರ್ ಪಾಟೀಲ್**
**ಶಾಸಕ, ಬೆಳಗಾವಿ ದಕ್ಷಿಣ**

ಚುನಾವಣೆಗಳಲ್ಲಿ ಪ್ರಚಾರ ಮಾಡುವುದಕ್ಕಿಂತ ಹೆಚ್ಚಾಗಿ ಮತದಾರರ ಜಾತಿ, ಮತ, ಒಲವು ನಿಲುವುಗಳ ಸಮೀಕ್ಷೆ ನಡೆಸಿ ಗೆಲುವಿನ ಮಾರ್ಜಿನ್ ಕಡೆಗೆ ಗಮನ ಹರಿಸುವುದು ಮುಖ್ಯ. ಅದಕ್ಕೆ ಪೂರಕವಾದ ಕಾರ್ಯತಂತ್ರವನ್ನು ನಿರೂಪಿಸಬೇಕು. ಉದಾಹರಣೆಗೆ ನನ್ನಂತಹ ಒಬ್ಬ ಶಾಸಕನಿಗೆ ಗೆಲ್ಲಲು ಸುಮಾರು ೪೦೦೦೦ ಮತಗಳು ಬೇಕಾಗುತ್ತದೆಂದರೆ ೪೩೦೦೦ ಮತಗಳಿಸುವ ಗುರಿ ಇಟ್ಟುಕೊಂಡು ಕೆಲಸ ಮಾಡಬೇಕು. ಇನ್ನು ಈ ಮತಗಳನ್ನು ಹಾಕುವವರು ಯಾರು? ಇದಕ್ಕೆ ಜಾತಿ ಸಮೀಕರಣವನ್ನು ಗಣನೆಗೆ ತಂದುಕೊಳ್ಳಬೇಕು. ಇದನ್ನು ಅನಂತಕುಮಾರ್ ಅತ್ಯಂತ ಸಮರ್ಥವಾಗಿ ನಿರ್ವಹಿಸಿದರು.

ಅನಂತಕುಮಾರ್ ರಾಜ್ಯಾಧ್ಯಕ್ಷರಾಗುವ ಮೊದಲು ಪಕ್ಷದಲ್ಲಿ ಕೆಲವೇ ಸಮುದಾಯಗಳ ಪ್ರಾತಿನಿಧ್ಯವಿರುತ್ತಿತ್ತು. ಹಾಗೆ ಪಕ್ಷದಿಂದ ದೂರ ಉಳಿದಿದ್ದ ಅನೇಕ ಜಾತಿಗಳ ನಾಯಕರನ್ನು ಅನಂತಕುಮಾರ್ ಪಕ್ಷಕ್ಕೆ ಕರೆತಂದರು. ಅವರಲ್ಲಿ ರಮೇಶ್ ಜಿಗಜಿಣಗಿ, ಶಾಣಪ್ಪ, ಗೋವಿಂದ ಕಾರಜೋಳ, ಉದಾಸಿ ಮುಂತಾದ ಅನೇಕ ಪ್ರಭಾವೀ ನಾಯಕರಿದ್ದರು. ಇದು ನಮ್ಮ ಪಕ್ಷಕ್ಕೆ 'ಟರ್ನಿಂಗ್ ಪಾಯಿಂಟ್' ಆಯಿತು. ಇವರೆಲ್ಲರ ಆಗಮನದಿಂದ ಪಕ್ಷವು ಅನೇಕ ಕ್ಷೇತ್ರಗಳಲ್ಲಿ ವಿಜಯದ ಗೆರೆಯನ್ನು ದಾಟುವುದು ಸಾಧ್ಯವಾಯಿತು.

ಇದರ ಜೊತೆಗೆ ಅನಂತಕುಮಾರ್ ನಮಗೆ ಇನ್ನೊಂದು ರೀತಿಯ ಮಾದರಿಯನ್ನೂ ಹಾಕಿಕೊಟ್ಟಿದ್ದರು. ಅವರು ತಮ್ಮ ಕ್ಷೇತ್ರದ ಚುನಾವಣೆಯ ಪ್ರಚಾರದಲ್ಲಿ ನಿರತರಾಗಿದ್ದಾಗಲೇ ಇತರ ಕ್ಷೇತ್ರಗಳಲ್ಲಿಯೂ ಪ್ರಚಾರ ಮಾಡುತ್ತಿದ್ದರು. ಇದರಿಂದ ಇತರ ಕ್ಷೇತ್ರಗಳಲ್ಲಿರುವ ಅವರ ಅಭಿಮಾನಿಗಳು ಪಕ್ಷಕ್ಕಾಗಿ ಕೆಲಸ ಮಾಡುವ ಉತ್ಸಾಹವನ್ನು ತಳೆಯುತ್ತಿದ್ದರು. ಕಾರಜೋಳರ ಅನೇಕ ಮತಗಳು ನಾನು ಸ್ಪರ್ಧಿಸಿದ ಕ್ಷೇತ್ರದಲ್ಲಿದ್ದವು. ಹಾಗೆಯೇ ಕಾರಜೋಳರ ಮುಧೋಳ ಕ್ಷೇತ್ರದಲ್ಲಿಯೂ ನನ್ನ ಪರವಾದ ಮತಗಳಿದ್ದವು. ಹೀಗಾಗಿ ನಾವಿಬ್ಬರೂ ಪರಸ್ಪರರ ಕ್ಷೇತ್ರಗಳಲ್ಲಿ ಪ್ರಚಾರ ಮಾಡಿದೆವು. ಇದರಿಂದಾಗಿ ನಮ್ಮ ಮತಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿ, ನಮ್ಮದೇ ಆದ ಮತಬ್ಯಾಂಕ್ ಸೃಷ್ಟಿಯಾಯಿತು. ಅಂತಿಮವಾಗಿ ೨೦೦೪ರ ಚುನಾವಣೆಯಲ್ಲಿ ಪಕ್ಷವು ೭೯ ಸ್ಥಾನಗಳನ್ನು ಗಳಿಸಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಮಿತ್ರಪಕ್ಷವಾಗಿದ್ದ ಸಂಯುಕ್ತ ಜನತಾದಳವು ಐದು ಸ್ಥಾನಗಳಲ್ಲಿ ಜಯಗಳಿಸಿತು.

ಈ ಚುನಾವಣೆಯಲ್ಲಿ ಅನಂತಕುಮಾರ್ ಮತ್ತು ಯಡಿಯೂರಪ್ಪ ಇಬ್ಬರೂ ರಾಜ್ಯಾದ್ಯಂತ ಓಡಾಡಿ ಪ್ರಚಾರ ಮಾಡಿದ್ದರು. ಆದರೆ ರಾಜ್ಯಾಧ್ಯಕ್ಷರಾಗಿ ಟಿಕೆಟ್ ಹಂಚಿಕೆ, ಸಂಪನ್ಮೂಲ ನಿರ್ವಹಣೆ, ಜಾತಿ ಸಮೀಕರಣ, ಪ್ರಭಾವೀ ವ್ಯಕ್ತಿಗಳನ್ನು ಗುರುತಿಸಿ ಪಕ್ಷಕ್ಕೆ ಕರೆತರುವುದು ಮುಂತಾದ ವಿಷಯಗಳಲ್ಲಿ ಅನಂತಕುಮಾರ್ ಪಾತ್ರ ಗಮನಾರ್ಹವಾಗಿತ್ತು. ಅವರಿಗೆ ವ್ಯಕ್ತಿಯ ಪ್ರತಿಭೆಯನ್ನು ಗುರುತಿಸುವ ಸಾಮರ್ಥ್ಯವಿತ್ತು. ಅವರು ಎಲ್ಲ ಪಕ್ಷಗಳ ನಾಯಕರೊಂದಿಗೂ ಉತ್ತಮ ಸಂಪರ್ಕ ಹೊಂದಿದ್ದರು. ಅವರು ಎಲ್ಲ ಸಮಾಜದ ಜನರ ಹಾಗೂ ಮುಖಂಡರ ಜೊತೆಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡಿದ್ದರು. ಅವರಿಗೆ ಸಂಘಟನೆಯ ಬಗ್ಗೆ ಅವರದ್ದೇ ಆದ ವಿಚಾರಗಳಿದ್ದವು. ಅವುಗಳನ್ನು ಕರ್ನಾಟಕದಲ್ಲಿ ಪ್ರಯೋಗ ಮಾಡಿ ಯಶಸ್ವಿಯಾದರು. ಅವರು ಅಂದು ಎಲ್ಲ ಸಮುದಾಯಗಳ ಜನರ ಬೆಂಬಲವನ್ನು ಗಳಿಸದಿರುತ್ತಿದ್ದರೆ ನಮ್ಮ ಪಕ್ಷ ನಲವತ್ತು ಕ್ಷೇತ್ರಗಳಲ್ಲೂ ಜಯಗಳಿಸುತ್ತಿರಲಿಲ್ಲ. ಆದರೆ, ಎಂಭತ್ತಕ್ಕೂ ಅಧಿಕ ಸ್ಥಾನಗಳನ್ನು ಗೆದ್ದಾಗ ಮುಂದಿನ ಚುನಾವಣೆಯಲ್ಲಿ ಪಕ್ಷವು ಅಧಿಕಾರಕ್ಕೆ ಬರುವುದೆಂಬ ವಿಶ್ವಾಸ ಕಾರ್ಯಕರ್ತರಲ್ಲಿ ಮೂಡಿತು.

೨೦೦೪ರಲ್ಲಿ ಭಾರತೀಯ ಜನತಾ ಪಕ್ಷವು ಅಧಿಕೃತ ವಿರೋಧಪಕ್ಷವಾಗಿ ಮಾನ್ಯತೆ ಗಳಿಸಿದ್ದರೂ ವಿರೋಧಪಕ್ಷದ ನಾಯಕನ ಆಯ್ಕೆ ವಿಳಂಬವಾಯಿತು. ಪುಟ 8 ರಲ್ಲಿ ಮುಂದುವರಿದಿದೆ

ಪುಟ 1 ರಿಂದ

# ಚುನಾವಣಾ ರಾಜಕೀಯದ ಚಾಣಕ್ಯ- ಅನಂತಕುಮಾರ್



ಚುನಾವಣೆಯಲ್ಲಿ ಪಕ್ಷದ ಬಲ ಇನ್ನಷ್ಟು ಹೆಚ್ಚಿತು. ಆದರೆ ೨೦೧೮ರ ಚುನಾವಣೆಯ ಹೊತ್ತಿಗೆ ೧೫ ವರ್ಷಗಳ ಆಡಳಿತ ವಿರೋಧಿ ಅಲೆಯ ನಡುವೆ ಪಕ್ಷದ ಭವಿಷ್ಯ ಅಸ್ಪಷ್ಟವಾಗಿತ್ತು. ಹೀಗಾಗಿ, ಶಿವರಾಜ್ ಸಿಂಗ್ ಚೌಹಾಣ್ ಅನಂತಕುಮಾರರನ್ನೇ ಚುನಾವಣಾ ಉಸ್ತುವಾರಿಯಾಗಿ ಕಳಿಸುವಂತೆ ಅಮಿತ್ ಶಾರವರನ್ನು ಕೇಳಿಕೊಂಡಿದ್ದರು. ಅಮಿತ್ ಶಾ ಅದಕ್ಕೆ ಒಪ್ಪಲಿಲ್ಲ, ಕಾರಣವನ್ನೂ ತಿಳಿಸಲಿಲ್ಲ. ಅನಂತಕುಮಾರ್ ಚಿಕಿತ್ಸೆಗೆಂದು ಅಮೆರಿಕಕ್ಕೆ ತೆರಳಿದರು. ಅವರ ಅನುಪಸ್ಥಿತಿಯಲ್ಲಿ ನಡೆದ ಚುನಾವಣೆಯಲ್ಲಿ ಪಕ್ಷ ಸ್ಪಷ್ಟ ಬಹುಮತ ಗಳಿಸಲು ವಿಫಲವಾಯಿತು. ನವೆಂಬರ್ ೧೨, ೨೦೧೮ರಂದು ಅನಂತಕುಮಾರ್ ವಿಧಿವಶರಾದ ಸಂದರ್ಭದಲ್ಲಿ ಶಿವರಾಜ್ ಸಿಂಗ್ ಚೌಹಾಣ್, ಅನಂತಕುಮಾರರ ನಾಯಕತ್ವ ಮತ್ತು ಮಧ್ಯಪ್ರದೇಶಕ್ಕೆ ಅವರ ಕೊಡುಗೆಯನ್ನು ಸ್ಮರಿಸುತ್ತ "ಅನಂತಕುಮಾರ್ ಅವರಿಂದಲೇ ನಾವು ಮಧ್ಯಪ್ರದೇಶದಲ್ಲಿ ಗೆಲ್ಲುತ್ತ ಬಂದಿದ್ದೆವು ಮತ್ತು ಇವತ್ತು ಅನಂತಕುಮಾರಿಲ್ಲದೆ ನಮಗೆ ದಿಕ್ಕು ತೋಚದಂತಾಗಿದೆ" ಎಂದು ಹೇಳಿದ್ದರು.

ಮಧ್ಯಪ್ರದೇಶದಲ್ಲಿಯೂ ಅನಂತಕುಮಾರ್ ಬುಡಕಟ್ಟು ಜನಾಂಗ ಮತ್ತು ಹಿಂದುಳಿದ ವರ್ಗದ ಜನರನ್ನು ಬಿಜೆಪಿಯ ರಾಷ್ಟ್ರೀಯ ಮುಖ್ಯವಾಹಿನಿಗೆ ಕರೆದುಕೊಂಡು ಬಂದರು. ಈ ವಿಷಯವನ್ನು ಇಂದು ಕರ್ನಾಟಕದ ರಾಜ್ಯಪಾಲರಾಗಿರುವ ಥಾವರ್‌ಚಂದ್ ಗೆಹ್ಲೋಟ್ ಅವರು ಪದೇ ಪದೇ ನೆನಪಿಸಿಕೊಳ್ಳುತ್ತಾರೆ. ಯಾವುದೋ ಒಂದು ಊರಿನಲ್ಲಿ ಶಾಸಕರಾಗಿದ್ದ ನಮ್ಮನ್ನು ದೆಹಲಿಯವರೆಗೆ ಕರೆದುಕೊಂಡು ನಮ್ಮ ಗೌರವವನ್ನು ಹೆಚ್ಚಿಸಿದವರು ಅನಂತಕುಮಾರ್ ಎಂದು ಅವರು ಹೇಳುತ್ತಾರೆ.

ಉತ್ತರಪ್ರದೇಶ ಅನಂತಕುಮಾರರಿಗೆ ಪ್ರಿಯವಾದ ರಾಜ್ಯ. ಅವರು ವಾಜಪೇಯಿ ಸಂಪುಟದಲ್ಲಿ ಸಂಸ್ಕೃತಿ ಸಚಿವರು ಮತ್ತು ನಗರಾಭಿವೃದ್ಧಿ ಸಚಿವರಾಗಿದ್ದಾಗ ಉತ್ತರಪ್ರದೇಶದಲ್ಲಿ ಋಷಿಕೇಶ, ಹರಿದ್ವಾರ, ವಾರಣಾಸಿ ಮುಂತಾದ ಕಡೆ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡಿದ್ದರು. ನಾಗರಿಕ ವಿಮಾನಯಾನ ಖಾತೆಯ ಸಚಿವರಾಗಿದ್ದಾಗ ಹಲವಾರು ವಿಮಾನ ನಿಲ್ದಾಣಗಳ ನವೀಕರಣ ಕಾರ್ಯವನ್ನು ನಡೆಸಿದ್ದರು. ಹಿಂದೂ ಸಂಸ್ಕೃತಿಯ ಅನೇಕ ಪವಿತ್ರ ಕ್ಷೇತ್ರಗಳು ಉತ್ತರ ಪ್ರದೇಶದಲ್ಲಿವೆ. ಹಿಂದಿನ ಸರಕಾರಗಳು ಈ ಕ್ಷೇತ್ರಗಳ ಬಗ್ಗೆ ನಿರ್ಲಕ್ಷ್ಯವನ್ನು ತಾಳಿದ್ದವು. ಅಟಲ್ ಮತ್ತು ಅದ್ವಾನಿಯವರ ನೇತೃತ್ವದಲ್ಲಿ ಈ ಪವಿತ್ರಕ್ಷೇತ್ರಗಳಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗಿತ್ತು. ಈ ರೀತಿಯಾಗಿ ಅನಂತಕುಮಾರ್ ಉತ್ತರಪ್ರದೇಶದೊಡನೆ ನಿಕಟವಾದ ಸಂಪರ್ಕವನ್ನು ನಿರಂತರವಾಗಿ ಇರಿಸಿಕೊಂಡಿದ್ದರು.

ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಉತ್ತರಪ್ರದೇಶದ ಎಲ್ಲ ಚುನಾವಣೆಗಳಲ್ಲಿ ಅನಂತಕುಮಾರ್ ಸಕ್ರಿಯ ಪಾತ್ರ ವಹಿಸಿದ್ದರು. ಇಡೀ ಉತ್ತರಪ್ರದೇಶದ ಬಗ್ಗೆ ಮಾಹಿತಿ ಅವರಲ್ಲಿರುತ್ತಿತ್ತು. ಒಂದು ಚುನಾವಣೆಯ ಸಂದರ್ಭದಲ್ಲಿ ಅವರು ವಾರಣಾಸಿಯನ್ನೇ ಕೇಂದ್ರವಾಗಿರಿಸಿಕೊಂಡು ಆ ಭಾಗದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ೨೦೧೭ರ ವಿಧಾನಸಭಾ ಚುನಾವಣೆಯಲ್ಲಿ ಗೋರಖಪುರದ ಮಠದಲ್ಲಿಯೇ ೩೦-೪೦ ದಿನ ವಾಸ್ತವ್ಯ ಹೂಡಿ ಆ ಭಾಗದ ಜವಾಬ್ದಾರಿಯನ್ನು ನಿರ್ವಹಿಸಿದ್ದರು. ಆ ಚುನಾವಣೆಯಲ್ಲಿ ಪಕ್ಷವು ಅಭೂತಪೂರ್ವ ಜಯಗಳಿಸಿ ಯೋಗಿ ಆದಿತ್ಯನಾಥ್ ಮುಖ್ಯಮಂತ್ರಿಯಾದರು.

ಅನಂತಕುಮಾರರ ಚುನಾವಣಾ ಕೌಶಲ್ಯವನ್ನು ಒರೆಗೆ ಹಚ್ಚಿದ ಇನ್ನೊಂದು ರಾಜ್ಯ, ಬಿಹಾರ. ಭಾರತದಲ್ಲಿ ರಾಜಕೀಯವಾಗಿ ಬಿಹಾರದಷ್ಟು ಸಂಕೀರ್ಣವಾದ ಪ್ರದೇಶ ಇನ್ನೊಂದಿಲ್ಲ. ಬಿಹಾರದಲ್ಲಿ ನವೆಂಬರ್ ೨೦೧೦ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅನಂತಕುಮಾರ್ ಪ್ರಭಾರಿಯಾಗಿದ್ದರು. ಅ ಸಮಯದಲ್ಲಿ ಸಂಯುಕ್ತ ಜನತಾ ದಳದ ನಿತೀಶ್‌ಕುಮಾರ್ ತುಂಬ ಪ್ರಭಾವಿಯಾಗಿದ್ದರು. ಜೆಡಿಯು ಮತ್ತು ಭಾರತೀಯ ಜನತಾ ಪಕ್ಷಗಳು ೨೦೦೫ರಿಂದಲೇ ಜಂಟಿಯಾಗಿ ಸರಕಾರ ನಡೆಸುತ್ತಿದ್ದರೂ ಅವುಗಳ ನಡುವಣ ಸಂಬಂಧ ಎಣ್ಣೆಸೀಗೆ ಕಾಯಿಯಂತಿತ್ತು ಎಂದರೆ ಅತಿಶಯೋಕ್ತಿಯಲ್ಲ. ಕಾಂಗ್ರೆಸ್ ಮತ್ತು ಆರ್‌ಜೆಡಿ ಪಕ್ಷಗಳಿಗೆ ವಿರೋಧಿಯಾಗಿದ್ದವೆಂಬುದೇ ಈ ಎರಡು ಪಕ್ಷಗಳ ನಡುವಣ ಸಾಮಾನ್ಯ ಅಂಶ. ಇದರ ಜೊತೆಗೆ ಅಂದಿನ ಬಿಹಾರ ರಾಜಕೀಯದಲ್ಲಿ ಪ್ರಭಾವಶಾಲಿಯಾಗಿದ್ದ ರಾಮ್ ವಿಲಾಸ್ ಪಾಸ್ವಾನ್ ಅವರ ಪಕ್ಷವೂ ಸಾಕಷ್ಟು ಜನಪ್ರಿಯವಾಗಿತ್ತು. ಈ ಎಲ್ಲ ಪಕ್ಷಗಳನ್ನು ಒಟ್ಟಿಗೆ ತಂದು ಒಗ್ಗಟ್ಟಿನಿಂದ ಹೋರಾಡುವಂತೆ ಮಾಡುವುದು ಸುಲಭದ ಮಾತಾಗಿರಲಿಲ್ಲ. ಈ ನಿಟ್ಟಿನಲ್ಲಿ ಅನಂತಕುಮಾರ್ ಯಶಸ್ವಿಯಾದರು. ೨೦೧೦ರ ಚುನಾವಣೆಯಲ್ಲಿ ನಿತೀಶ್ ಕುಮಾರ್ ಮುಖ್ಯಮಂತ್ರಿಯಾಗಬೇಕೆಂಬುದು ಜನಸಾಮಾನ್ಯರ ಆಶಯವಾಗಿತ್ತು. ಆದರೆ ಮಿತ್ರಪಕ್ಷವಾಗಿ ಬೆಂಬಲ ನೀಡುವಾಗ ತನ್ನ ನೆಲೆಗಳನ್ನು ಉಳಿಸಿಕೊಳ್ಳುವುದು ಯಾವುದೇ ಪಕ್ಷಕ್ಕೆ ಕಷ್ಟದ ಕೆಲಸ. ಇಂತಹ ಇಬ್ಬಂದಿ ಸ್ಥಿತಿಯಲ್ಲಿ ಚುನಾವಣಾ ಉಸ್ತುವಾರಿಯಾಗಿ ನಿಯುಕ್ತರಾದ ಅನಂತಕುಮಾರರ ಎದುರು ನಿತೀಶ್‌ಕುಮಾರರಿಗಾಗಿ ಮತವನ್ನು ಕೇಳುತ್ತಲೇ ಪಕ್ಷದ ಬಲವನ್ನೂ ಹೆಚ್ಚಿಸಿಕೊಳ್ಳುವ ಸವಾಲು ಎದುರಾಗಿತ್ತು. ಪಕ್ಷಗಳ ನಡುವೆ ಕ್ಷೇತ್ರಗಳ ಹಂಚಿಕೆ, ಗೆಲ್ಲುವ ಅಭ್ಯರ್ಥಿಗಳ ಆಯ್ಕೆ, ಮುಂತಾದ ಸೂಕ್ಷ್ಮ ವಿಚಾರಗಳನ್ನು ಅನಂತಕುಮಾರ್ ಲೀಲಾಜಾಲವಾಗಿ ನಿಭಾಯಿಸಿದರು. ಇಡೀ ಚುನಾವಣೆಯ ಕಾರ್ಯತಂತ್ರವನ್ನು ರೂಪಿಸಿದ್ದಲ್ಲದೆ, ಪ್ರತಿಯೊಂದು ಕ್ಷೇತ್ರಕ್ಕೆ ಭೇಟಿ, ಕಾರ್ಯಕರ್ತರ ಸಭೆ ಮತ್ತು ಪ್ರಚಾರ ಸಾಮಗ್ರಿ, ಹಾಗೂ ಹಣಕಾಸಿನ ವ್ಯವಸ್ಥೆಯನ್ನು ಚತುರತೆಯಿಂದ ನಿರ್ವಹಿಸಿದರು. ಬಿಹಾರದ ವಿಶಿಷ್ಟ ಭಾಷೆಯಲ್ಲಿಯೇ ಸಂವಹನ ಮಾಡುತ್ತ, ಬಿಹಾರದ ಆಹಾರವನ್ನೇ ಸೇವಿಸುತ್ತ ಕಾರ್ಯಕರ್ತರಲ್ಲಿ ಒಂದಾಗಿ ಬಿಹಾರದ ಮತದಾರರ ಮನವನ್ನು ಗೆಲ್ಲುವಲ್ಲಿ ಯಶಸ್ವಿಯಾದರು.

ಅಂತಿಮವಾಗಿ, ಜೆಡಿಯು ೧೪೧ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ೧೧೫ ಕಡೆ ವಿಜಯಿಯಾದರೆ, ಭಾರತೀಯ ಜನತಾಪಕ್ಷವು ೧೦೨ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ೯೧ ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ಮಿತ್ರಪಕ್ಷಕ್ಕಿಂತ ಹೆಚ್ಚಿನ ದಾಮಾಶಯದಲ್ಲಿ ಜಯಗಳಿಸಿತು. ಈ ಜಯದ ಪ್ರಮಾಣ ಬಹುಶಃ ಭಾರತದ ವಿಧಾನಸಭಾ ಚುನಾವಣೆಯಲ್ಲಿಯೇ ಒಂದು ದಾಖಲೆಯಾಗಿದ್ದಿರಬಹುದು. ಇತರ ಎಲ್ಲ ಪಕ್ಷಗಳೂ ಧೂಳೀಪಟವಾದವು. ಅನಂತಕುಮಾರರ ಈ ಅಭೂತಪೂರ್ವ ಸಾಧನೆಯನ್ನು ಅವರ ಬೆಂಗಳೂರಿನ ಅಭಿಮಾನಿಗಳು ನಗರದ ತುಂಬ ಬ್ಯಾನರ್ ಕಟ್ಟುವ ಮೂಲಕ ಸಂಭ್ರಮಿಸಿದ್ದರು. ಅನಂತಕುಮಾರ್ ಲೋಕಸಭಾ ಚುನಾವಣೆಗಳಲ್ಲಿ ಯಾವುದೇ ರಾಜ್ಯದ ಉಸ್ತುವಾರಿಯಾಗಿರದಿದ್ದಾಗಲೂ ತಮ್ಮ ಕ್ಷೇತ್ರದ ಚುನಾವಣಾಕಾರ್ಯ ಮುಗಿದ ನಂತರ ಇತರ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಲು ತೆರಳುತ್ತಿದ್ದರು. ಕೋರಿಕೆಯ ಮೇಲೆ ಇತರ ಅಭ್ಯರ್ಥಿಗಳಿಗೆ ಕಾರ್ಯತಂತ್ರಗಳನ್ನು ರೂಪಿಸಿಕೊಟ್ಟು ಸಹಾಯ ಮಾಡುತ್ತಿದ್ದರು. ಅವರ ಪರವಾಗಿ ಪ್ರಚಾರ ಭಾಷಣ ಮಾಡುತ್ತಿದ್ದರು. ಕೆಲವು ನಾಯಕರು ತಮ್ಮ ನಾಲಗೆಯನ್ನು ಹರಿಬಿಟ್ಟು ಪಕ್ಷದ ಹಿತಾಸಕ್ತಿಗೆ ವಿರುದ್ಧವಾದ ಹೇಳಿಕೆಗಳನ್ನು ಕೊಟ್ಟಾಗ ಅಂತಹ ಸಂದರ್ಭಗಳನ್ನು ನಿಭಾಯಿಸುವುದರಲ್ಲಿ ಅನಂತಕುಮಾರ್ ನಿಷ್ಣಾತರಾಗಿದ್ದರು. ದೇಶದಾದ್ಯಂತ ಕಾರ್ಯಕರ್ತರನ್ನು ಹುರಿದುಂಬಿಸುವುದು, ಅವರಿಗೆ ಹಣಕಾಸಿನ ವ್ಯವಸ್ಥೆ ಮಾಡುವುದು, ಕ್ಷೇತ್ರಕ್ಕೆ ತಕ್ಕಂತೆ ಹರಿತವಾದ ಘೋಷಣೆಗಳನ್ನು ರಚಿಸುವುದು, ಹೀಗೆ ಒಂದಲ್ಲ ಒಂದು ರೀತಿಯಿಂದ ಇಡೀ ಚುನಾವಣೆಯ ಅವಧಿಯಲ್ಲಿ ಸಕ್ರಿಯರಾಗಿರುತ್ತಿದ್ದರು. ಬಹುಶಃ ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಕೆಲವು ಪೂರ್ವೋತ್ತರ ರಾಜ್ಯಗಳನ್ನು ಹೊರತುಪಡಿಸಿ ಇತರ ಎಲ್ಲ ರಾಜ್ಯಗಳಲ್ಲಿ ಅನಂತಕುಮಾರ್ ಚುನಾವಣಾಕಾರ್ಯ ನಡೆಸಿದ್ದಾರೆ.

ಅಂಡಮಾನ್, ಗೋವಾ, ಅಸ್ಸಾಂ ರಾಜ್ಯಗಳಿಗೂ ಅವರು ಹೋಗಿದ್ದರು. ಅನಂತಕುಮಾರರ ಸರಕಾರಿ ನಿವಾಸ ದೆಹಲಿಯಲ್ಲಿತ್ತು ಹಾಗೂ ನಗರಾಭಿವೃದ್ಧಿ ಸಚಿವರಾದ್ದಾಗ ದೆಹಲಿಯ ಜವಾಬ್ದಾರಿ ಅವರ ಮೇಲಿತ್ತು. ಹೀಗಾಗಿ ಅವರು ದೆಹಲಿಯ ನಗರಸಭೆ, ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ ವಿಶೇಷವಾದ ಆಸಕ್ತಿವಹಿಸಿದ್ದರು. ಚುನಾವಣೆಗಳೇ ಪ್ರಜಾಪ್ರಭುತ್ವದ ಜೀವಾಳ. ಅನಂತಕುಮಾರರು ಚುನಾವಣಾ ರಾಜಕೀಯದ ಚಾಣಕ್ಯನಂತಿದ್ದರು. ವಂಶಪಾರಂಪರ್ಯವಾದ ಯಾವುದೇ ಬಳುವಳಿಯಿಲ್ಲದೆ, ಅತ್ಯಂತ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಅನಂತಕುಮಾರರು ಚುನಾವಣೆಯ ಚದುರಂಗದಾಟದಲ್ಲಿ ಪಳಗಿದ ಆಟಗಾರನಂತೆ ಯಶಸ್ಸುಗಳಿಸಿ ದೇಶದ ರಾಜಕೀಯದ ಆಗಸದಲ್ಲಿ ಧ್ರುವತಾರೆಯಂತೆ ಬೆಳಗಿದರು ಎಂದರೆ ಅದು ಅತಿಶಯೋಕ್ತಿಯಲ್ಲ. ಅನಂತಕುಮಾರರ ಜೀವನ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಂಶೋಧನೆಗಳಿಗೆ ಅವಕಾಶ ನೀಡುವಂತಿದೆ. ◆



# ಸರಳ, ತತ್ತ್ವವಾದಿ, ಕುಶಲ ಆಡಳಿತಗಾರ - ಸುಶೀಲ್ ಮೋದಿ

ಜೇಟ್ಲಿ, ಸುಶೀಲ್ ಮೋದಿ, ಪ್ರಮೋದ್ ಮಹಾಜನ್ ಮತ್ತು ಅನಂತಕುಮಾರ್ ಮುಂತಾದವರು ಅಟಲ್ ಮತ್ತು ಅದ್ವಾನಿಯವರ ಕಣ್ಕಾಪಿನಲ್ಲಿ ಬೆಳೆದ ಭಾರತೀಯ ಜನತಾಪಕ್ಷದ ಎರಡನೆಯ ಸಾಲಿನ ನಾಯಕರು. ಇವರೆಲ್ಲರೂ ಪಕ್ಷಕ್ಕೆ ವಿದ್ಯಾರ್ಥಿ ಪರಿಷತ್ತಿನ ಕೊಡುಗೆ ಎಂದರೆ ತಪ್ಪಲ್ಲ. ಈ ನಾಲ್ವರಲ್ಲಿ ಕೊನೆಯವರಾಗಿ, ಸುಶೀಲ್ ಕುಮಾರ್ ಮೋದಿ, ದಿನಾಂಕ ೧೩/೦೫/೨೦೨೪ರಂದು ನಿಧನರಾದರು. ಅನಂತಪಥ ಪತ್ರಿಕೆ ಅವರ ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಶಿಕ್ಷಣರಂಗದ ಅವ್ಯವಸ್ಥೆಯ ಬಗ್ಗೆ ಕರ್ನಾಟಕದಲ್ಲಿ ನಡೆದ ಹೋರಾಟದ ನೇತೃತ್ವವನ್ನು ಅನಂತಕುಮಾರರು ವಹಿಸಿದ್ದರೆ, ಮೋದಿಯವರು ಬಿಹಾರ ಪ್ರದೇಶ ಛಾತ್ರ ಸಂಘರ್ಷ ಸಮಿತಿಯ ನಾಯಕರಾಗಿ ಬೃಹತ್ ಚಳುವಳಿಗಳನ್ನು ಸಂಘಟಿಸಿದರು. ಮೋದಿಯವರು ಇಡೀ ದೇಶದ ರಾಜಕಾರಣಕ್ಕೆ ಹೊಸ ತಿರುವು ನೀಡಿದ ಲೋಕನಾಯಕ ಜಯಪ್ರಕಾಶ ನಾರಾಯಣರ 'ಸಂಪೂರ್ಣಕ್ರಾಂತಿ'ಯ ಮುಖಂಡರಾಗಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಜೈಲುವಾಸವನ್ನೂ ಅನುಭವಿಸಿದರು.

ಸುಶೀಲ್ ಕುಮಾರ್ ಮೋದಿಯವರು ಅನಂತಕುಮಾರರ ದೀರ್ಘಕಾಲದ ಮಿತ್ರ ಹಾಗೂ ಸಹಯೋಗಿ. ಅವರಿಬ್ಬರೂ ಮೊದಲ ಬಾರಿಗೆ ಸಂಧಿಸಿದ್ದು ಎಬಿವಿಪಿಯ ೧೯೭೭ರ ವಾರಣಾಸಿ ಸಮ್ಮೇಳನದಲ್ಲಿ. ಮುಂದೆ, ಅನಂತಕುಮಾರರು ವಿದ್ಯಾರ್ಥಿ ಪರಿಷತ್ತಿನ ಪೂರ್ಣಾವಧಿ ಕಾರ್ಯಕರ್ತರಾಗಿ ನಂತರ, ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಅದೇ ಸಮಯದಲ್ಲಿ, ಸುಶೀಲ್ ಕುಮಾರ್ ಮೋದಿಯವರೂ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. ನಂತರ, ಇಬ್ಬರೂ ಭಾರತೀಯ ಜನತಾ ಪಾರ್ಟಿಯ ಮೂಲಕ ರಾಜಕಾರಣಕ್ಕಿಳಿದು ತಮ್ಮ ತಮ್ಮ ರಾಜ್ಯಗಳಲ್ಲಿ ಸಕ್ರಿಯರಾಗಿ ಕೆಲಸ ಮಾಡಿದರು. ಅನಂತಕುಮಾರ್, ಬಿಹಾರ್ ರಾಜ್ಯದ ಚುನಾವಣೆಗಳಲ್ಲಿ ಎರಡು ಬಾರಿ ಪ್ರಭಾರಿಯಾಗಿ ಕೆಲಸ ಮಾಡಿದ್ದರು. ಮೊದಲಬಾರಿಗೆ ಜಂಟಿಯಾಗಿ ಸ್ಪರ್ಧಿಸಿದಾಗ ಮಿತ್ರ ಪಕ್ಷ ಸಮತಾ ಪಕ್ಷ(ಇಂದಿನ ಸಂಯುಕ್ತ ಜನತಾದಳ)ವನ್ನು ಸಂಖ್ಯೆಗಳಲ್ಲಿ ಹಿಂದಿಕ್ಕಿ, ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಆಗ ಬಿಜೆಪಿಯ ಹಿರಿಯ ನೇತಾರ, ಸುಶೀಲ್ ಕುಮಾರ್ ಮೋದಿಯವರೇ ಮುಖ್ಯಮಂತ್ರಿಗಳಾಗಬೇಕೆಂಬ ಒತ್ತಡ ಸೃಷ್ಟಿಯಾಗಿತ್ತು. ಆದರೆ, ಚುನಾವಣೆಗೆ ಮೊದಲೇ ನಡೆದ ಒಪ್ಪಂದದಂತೆ ನಿತೀಶ್ ಕುಮಾರ್ ಮುಖ್ಯಮಂತ್ರಿಯಾಗಿ ಆಯ್ಕೆಯಾಗಬೇಕಿತ್ತು. ಈ ಸಮಸ್ಯೆ ಸುಲಲಿತವಾಗಿ ಬಗೆಹರಿಯಲು ಮೋದಿಯವರ ಜೊತೆಗೆ ಅನಂತಕುಮಾರರಿಗಿದ್ದ ಸ್ನೇಹವೇ ಕಾರಣವಾಗಿತ್ತು.

ನಿತೀಶ್ ಕುಮಾರ್ ಹಾಗೂ ಸುಶೀಲ್‌ಕುಮಾರ್ ಮೋದಿಯವರು ರಾಮ-ಲಕ್ಷ್ಮಣರ ಜೋಡಿಯಂತೆ ಕೆಲಸಮಾಡಿ 'ಜಂಗಲ್ ರಾಜ್' ಎಂದೇ ಪ್ರಸಿದ್ಧವಾಗಿದ್ದ ಬಿಹಾರದ ಕಾನೂನು ವ್ಯವಸ್ಥೆಯನ್ನು ಸುಧಾರಿಸಿದರು. ನಿತೀಶರ ಮಂತ್ರಿಮಂಡಲದಲ್ಲಿ ಸುಶೀಲ್ ಕುಮಾರ್ ಮೋದಿ, ೧೧ ವರ್ಷ ಬಿಹಾರದ ಉಪ ಮುಖ್ಯಮಂತ್ರಿಯಾಗಿ ಹಾಗೂ ಹಣಕಾಸು ಮೊದಲಾದ ಪ್ರಮುಖ ಖಾತೆಗಳನ್ನು ನಿಭಾಯಿಸಿದ್ದರು. ವಿಧಾನ ಸಭೆ, ವಿಧಾನ ಪರಿಷತ್ತು, ಲೋಕಸಭೆ ಮತ್ತು ರಾಜ್ಯಸಭೆ - ಈ ನಾಲ್ಕೂ ಸಭೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಹಿರಿಮೆ, ಮೋದಿಯವರದ್ದು.

ಅನಂತಕುಮಾರ್ ಮತ್ತು ಸುಶೀಲ್ ಕುಮಾರ್ ಮೋದಿ - ಇಬ್ಬರಿಗೂ ರಾಜ್ಯದ ಮುಖ್ಯಮಂತ್ರಿಯಾಗುವ ಅರ್ಹತೆಗಳಿದ್ದವು; ಅವಕಾಶಗಳೂ ಒದಗಿ ಬಂದಿದ್ದವು. ಆದರೆ 'ದೇಶ ಮೊದಲು' ಎಂಬ ತತ್ತ್ವಕ್ಕೆ ಬದ್ಧರಾಗಿ ಪಕ್ಷದ ಹಿತದೃಷ್ಟಿಯಿಂದ ಆ ಅವಕಾಶಗಳನ್ನು ಸ್ವಯಂಸ್ಫೂರ್ತಿಯಿಂದ ಬಿಟ್ಟುಕೊಟ್ಟರು. ಮೋದಿಯವರ ನಿಧನದಿಂದ ಸರಳ, ತತ್ತ್ವವಾದಿ, ಕುಶಲ ಆಡಳಿತಗಾರನ್ನು ದೇಶ ಕಳೆದುಕೊಂಡಿದೆ.

-ಶ್ರೀ ಜಿ.ಎಂ. ಇನಾಂದಾರ್ ◆

# ಪದ್ಮಶ್ರೀ ಪ್ರೊ. ಎಂ.ಕೆ.ಎಸ್. ಅವರಿಗೆ ಅಭಿನಂದನೆ

ವಿದ್ಯಾರ್ಥಿ ಪರಿಷತ್ತು ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಲ್ಲಿ ಎಂ.ಕೆ.ಎಸ್ ಎಂದೇ ಹೆಸರುವಾಸಿಯಾಗಿರುವ ಪ್ರೊಫೆಸರ್ ಮಾಕಂ ಕೃಷ್ಣಮೂರ್ತಿ ಶ್ರೀಧರ್ ಅವರಿಗೆ ರಾಷ್ಟ್ರದ ಉನ್ನತ ನಾಗರಿಕ ಪ್ರಶಸ್ತಿಯಾದ ಪದ್ಮಶ್ರೀಯನ್ನು ಗೌರವಾನ್ವಿತ ರಾಷ್ಟ್ರಪತಿ, ಶ್ರೀಮತಿ ದ್ರೌಪದಿ ಮುರ್ಮುರವರು ಮೇ. 9ರಂದು ಪ್ರದಾನ ಮಾಡಿದರು. ಇದು ಕರ್ನಾಟಕದ ಶಿಕ್ಷಣರಂಗಕ್ಕೆ ಸಂದ ಗೌರವ.

ಮನಃಸ್ಥೈರ್ಯವಿದ್ದರೆ ಸದಾ ಗಾಲಿಕುರ್ಚಿಗೆ ಅಂಟಿಕೊಂಡಿರಬೇಕಾದ ದೇಹಸ್ಥಿತಿ ಕೂಡ ಸಾಧನೆಗೆ ಅಡ್ಡಿ ಬರುವುದಿಲ್ಲ ಎಂಬುದನ್ನು ಸಾಬೀತುಪಡಿಸಿ ಸಾವಿರಾರು ಜನರಿಗೆ ಪ್ರೇರಕಶಕ್ತಿಯಾಗಿರುವವರು, ಪ್ರೊ. ಶ್ರೀಧರ್.

ಅನಂತಕುಮಾರ್ ಅವರ ಸ್ನೇಹಿತರೂ ಹಾಗೂ ಹಲವು ದಶಕಗಳಿಂದ ವಿದ್ಯಾರ್ಥಿ ಪರಿಷತ್ತಿನ ಹಿರಿಯ ಕಾರ್ಯಕರ್ತರೂ ಮಾರ್ಗದರ್ಶಕರೂ ಆಗಿರುವ ಎಂ.ಕೆ.ಎಸ್. ಅವರಿಗೆ ಈ ಪ್ರಶಸ್ತಿ ಲಭಿಸಿದ್ದು ಎಲ್ಲರಿಗೂ ಸಂತಸ ತಂದಿದೆ. "ಅನಂತಪಥ" ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಎಂ.ಕೆ.ಎಸ್. ಅವರಿಗೆ ಅರವತ್ತು ತುಂಬಿದ ಸಂದರ್ಭದಲ್ಲಿ ವಿಜಯಾ ಕಾಲೇಜಿನಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಪ್ರೊ. ಎಂ.ಕೆ.ಎಸ್ ಅವರನ್ನು ಗೌರವಿಸಿದ್ದರು. ಅವರು ಅನಂತಕುಮಾರ್ ಪ್ರತಿಷ್ಠಾನದ 'ದೇಶ ಮೊದಲು ಸಂವಾದ" ಕಾರ್ಯಕ್ರಮದಲ್ಲಿ ಹೊಸ ಶಿಕ್ಷಣ ನೀತಿಯ ಬಗ್ಗೆ ಅಪೂರ್ವ ಒಳನೋಟಗಳನ್ನು ಹಂಚಿಕೊಂಡಿದ್ದನ್ನು ಪ್ರತಿಷ್ಠಾನವು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತದೆ.

ಖ್ಯಾತ ಶಿಕ್ಷಣ ತಜ್ಞರಾಗಿ ಹೆಸರುವಾಸಿಯಾಗಿರುವ ಪ್ರೊ. ಎಂ.ಕೆ.ಎಸ್. ಕುಶಲ ಸಂಘಟಕರು. ಅವರು ನೂರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರೂ ಹೌದು. ಕರ್ನಾಟಕ ಜ್ಞಾನ ಆಯೋಗದ ಸದಸ್ಯ ಕಾರ್ಯದರ್ಶಿಯಾಗಿ ಜವಾಬ್ದಾರಿ ನಿರ್ವಹಿಸಿದ ಪ್ರೊ. ಎಂ.ಕೆ.ಎಸ್, ಶಿಕ್ಷಣ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು ತಯಾರಿಕೆ ಸಮಿತಿಯ ಸದಸ್ಯರಾಗಿಯೂ ಅವರ ಪಾತ್ರ ಪ್ರಮುಖವಾದುದು. ಎಂ.ಕೆ.ಎಸ್. ಈಗ ಯುಜಿಸಿಯ ಎಕ್ಸಿಕ್ಯೂಟಿವ್ ಸಮಿತಿಯ ಸದಸ್ಯರಾಗಿದ್ದಾರೆ. ಇನ್ನೂ ಅನೇಕ ಸಂಸ್ಥೆಗಳಲ್ಲಿ ಮಾರ್ಗದರ್ಶನ ನೀಡುತ್ತಿರುವ ಪ್ರೊ. ಶ್ರೀಧರ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಕೂಡ ಭಾಜನರಾಗಿದ್ದಾರೆ. ಚಾಣಕ್ಯ ಯೂನಿವರ್ಸಿಟಿಯ ಪ್ರಮುಖರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರೊ. ಎಂ.ಕೆ.ಎಸ್. ಈ ಪ್ರಶಸ್ತಿಯನ್ನು ಆರ್.ಎಸ್.ಎಸ್. ಹಾಗೂ ವಿದ್ಯಾರ್ಥಿ ಪರಿಷತ್ ಸಂಘಟನೆ, ವಿಚಾರ ಹಾಗೂ ಕಾರ್ಯಕರ್ತರಿಗೆ ಸಮರ್ಪಿಸಿದ್ದಾರೆ. ◆







ಪುಟ 5 ರಿಂದ

# ಯಶಸ್ಸಿನ ಹಾದಿ ತೋರಿದ ಅನಂತಕುಮಾರ್

ಪಕ್ಷದಲ್ಲಿ ಎರಡು ಬಣಗಳು ಹುಟ್ಟಿಕೊಂಡಿವೆ ಎಂಬ ಭಾವನೆ ಎಲ್ಲರಲ್ಲೂ ಹುಟ್ಟಿಕೊಂಡಿತು. ಯಡಿಯೂರಪ್ಪನವರ ಹಾಗೂ ಅನಂತಕುಮಾರರ ಬಣ ಎಂದು ಗುರುತಿಸುವ ಮಟ್ಟಿಗೆ ಗುಂಪುಗಾರಿಕೆ ಬೆಳೆಯಿತು. ೨೦೦೬ರಲ್ಲಿ ನಮ್ಮ ಪಕ್ಷವು ಜಾತ್ಯತೀತ ಜನತಾದಳದ ಜೊತೆ ಸೇರಿ ಸಮ್ಮಿಶ್ರ ಸರಕಾರ ರಚಿಸಿತು. ಯಡಿಯೂರಪ್ಪನವರು ಉಪಮುಖ್ಯಮಂತ್ರಿಗಳಾದರು. ಅನಂತಕುಮಾರರ ಪ್ರಭಾವದಿಂದ ಟಿಕೆಟ್ ಪಡೆದುಕೊಂಡು ಅವರ ಸಹಾಯದಿಂದ ಗೆದ್ದುಬಂದ ಶಾಸಕರೇ ಸುಮಾರು ಶೇ. ೮೦ ರಷ್ಟು ಇದ್ದು ಅವರೆಲ್ಲರೂ ಅನಂತಕುಮಾರರೇ ಮುಖ್ಯಮಂತ್ರಿಯಾಗಬೇಕೆಂದು ಬಯಸಿದ್ದರು. ನಾನು, ಚರಂತಿಮಠ ಮುಂತಾದವರು ತಿಂಗಳಿಗೊಮ್ಮೆ, ಎರಡು ತಿಂಗಳಿಗೊಮ್ಮೆ ಅನಂತಕುಮಾರ್ ಸಾಹೇಬರ ಮನೆಗೆ ಹೋಗುತ್ತಿದ್ದವು. ಆದರೆ ಹೀಗೆ ಬಂದು ಹೋಗುವವರ ಮೇಲೆ ಪೋಲೀಸರು ಮತ್ತು ಹೊರಗಿರುವ ಕೆಲವರು ನಿಗಾ ಇರಿಸಿದ್ದರು ಎಂಬುದು ವಿಷಾದದ ಸಂಗತಿ. ಇದನ್ನು ತಿಳಿದಿದ್ದ ಅನಂತಕುಮಾರರು, "ನಮ್ಮ ಮನೆಗೆ ಸುಮ್ಮನೆ ಯಾಕೆ ಬರ್ತೀರಿ, ನಿಮ್ಮ ಮೇಲೆ ನೆಗೆಟಿವ್ ಭಾವನೆ ಬರಬಹುದು" ಎಂದು ಎಚ್ಚರಿಕೆ ನೀಡುತ್ತಿದ್ದರು. "ನಾವು ಶಾಸಕರಾಗಲು ಪಕ್ಷಕ್ಕೆ ಬಂದವರಲ್ಲ, ಕಾರ್ಯಕರ್ತರಾಗಿ ದುಡಿಯುತ್ತಿರುವವರನ್ನು ನೀವು ಗುರುತಿಸಿ ಎಂಎಲ್‌ಎ ಮಾಡಿದಿರಿ. ನಮ್ಮ ಈ ಸ್ಥಾನಮಾನಕ್ಕೆ ನೀವೇ ಕಾರಣರು. ನೀವು ಬರಬೇಡಿ ಎಂದರೂ ನಾವು ನಿಮ್ಮ ಮನೆಗೆ ಬರುತ್ತೇವೆ" ಎಂದು ನಾವು ಉತ್ತರ ನೀಡುತ್ತಿದ್ದೆವು. ವಿರೋಧಿಗಳು ಅನಂತಕುಮಾರರ ವಿರುದ್ಧ ಪತ್ರಿಕೆಗಳಲ್ಲಿ ಆಗಾಗ ಲೇಖನಗಳನ್ನು ಬರೆಸುತ್ತಿದ್ದರು. ಆದರೆ ಅನಂತಕುಮಾರ್ ಅವನ್ನೆಲ್ಲ ಓದಿ ನಕ್ಕು ಸುಮ್ಮನಾಗುತ್ತಿದ್ದರು. ಅವರಿವರ ವಿರುದ್ಧ ಮಾತನಾಡಿ ಎಂದು ನಮಗೆ ಒಮ್ಮೆಯೂ ಹೇಳಿರಲಿಲ್ಲ. ಬದಲಾಗಿ, ತಮ್ಮನ್ನು 'ವಿರೋಧಿಸುವವರಿಗೆ' ಬೆಂಬಲ ನೀಡಿ ಎಂದು ಹೇಳುತ್ತಿದ್ದರು. ಅನಂತಕುಮಾರರಿಗೆ ಸ್ವಾರ್ಥಕ್ಕಿಂತ ಪಕ್ಷ ಮತ್ತು ಕಾರ್ಯಕರ್ತರೇ ಮುಖ್ಯವಾಗಿದ್ದರು.

೨೦೦೭ರಿಂದ ಒಂದೂವರೆ ವರ್ಷ ಕೆಲಸ ಮಾಡಿದ ನಂತರ ಅನಂತಕುಮಾರ್ ಕೇಂದ್ರ ರಾಜಕೀಯಕ್ಕೆ ಮರಳಿದರು. ನಮ್ಮ ಕಡೆ ಬರುವಾಗ ಗೋವಾ ವಿಮಾನನಿಲ್ದಾಣಕ್ಕೆ ಬಂದಿಳಿಯುತ್ತಿದ್ದರು. ಆಗ ಇತರ ಪದಾಧಿಕಾರಿಗಳ ಹತ್ತಿರ ಬೆಲೆಬಾಳುವ ಕಾರುಗಳಿದ್ದರೂ ಲಕ್ಷಿಸದೆ, ಕಾರನ್ನು ತರುವಂತೆ ನನಗೇ ಹೇಳುತ್ತಿದ್ದರು. ಅನಂತಕುಮಾರರಿಗೆ ಶ್ರೀಮಂತಿಕೆ ಮುಖ್ಯವಾಗಿರಲಿಲ್ಲ, ಪ್ರೀತಿ, ಪ್ರೇಮ, ವಿಶ್ವಾಸಗಳೇ ಮುಖ್ಯವಾಗಿದ್ದವು.

೨೦೧೮- ಅನಂತಕುಮಾರರ ಅನಾರೋಗ್ಯದ ವಿಚಾರ ನಮಗೆ ಗೊತ್ತಿರಲಿಲ್ಲ. ವಾಜಪೇಯಿಯವರ ನಿಧನಕ್ಕೆ ಒಂದು ವಾರದ ಮೊದಲು ತಿಳಿಯಿತು. ಆಗ ಅವರು ಚಿಕಿತ್ಸೆ ಪಡೆಯುತ್ತಿದ್ದರು. ಕುತ್ತಿಗೆಗೆ ಪಟ್ಟಿಕಟ್ಟಿಕೊಂಡಿದ್ದರು. ಆಗೊಮ್ಮೆ ನಾನು ಮತ್ತು ಚರಂತಿಮಠ, ಅವರ ಜೊತೆ ಸುಮಾರು ೨೦೦ ಮೀಟರ್ ಹೆಜ್ಜೆ ಹಾಕಿದ್ದೆವು. ಅದೇ ನಮ್ಮ ಕೊನೆಯ ಭೇಟಿಯಾಯಿತು. ಅನಂತಕುಮಾರ್ ನಿಧನಕ್ಕೆ ಕರ್ನಾಟಕ ವಿಧಾನ ಸಭೆ ಶ್ರದ್ಧಾಂಜಲಿ ಅರ್ಪಿಸಿತು. ಆ ಸಂದರ್ಭದಲ್ಲಿ ವಿವಿಧ ಪಕ್ಷಗಳ ನಾಯಕರು ಮತ್ತು ಸದಸ್ಯರು ಮಾಡಿದ ಭಾಷಣಗಳು ಅನಂತಕುಮಾರರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿವೆ. ಅವುಗಳನ್ನು ಸಂಗ್ರಹಿಸಿದರೆ ಅದೊಂದು ಉತ್ತಮ ದಾಖಲೆಯಾಗುತ್ತದೆ.

ನಾನು ಹುಟ್ಟಿದ್ದು ೧೯೬೯ರಲ್ಲಿ. ಅನಂತಕುಮಾರ್ ನನಗಿಂತ ಹತ್ತು ವರ್ಷ ದೊಡ್ಡವರು. ಅವರನ್ನು ನಾನು ಸಂಪರ್ಕಿಸುವ ಕಾಲಕ್ಕೆ ಅವರು ಪಕ್ಷದಲ್ಲಿ ಹಿರಿಯ ಸ್ಥಾನವನ್ನು ಅಲಂಕರಿಸಿದ್ದರು. ಅಷ್ಟು ಉನ್ನತ ಸ್ಥಾನದಲ್ಲಿದ್ದರೂ ನನ್ನಂತಹ ಕಿರಿಯರನ್ನು ಗುರುತಿಸಿ ಪ್ರೀತಿಯಿಂದ, ವಿಶ್ವಾಸದಿಂದ ನಡೆಸಿಕೊಂಡರು, ನಮ್ಮನ್ನು ಬೆಳೆಸಿದರು. ಅಂತಹ ನಾಯಕರನ್ನು ಇನ್ನೊಮ್ಮೆ ಕಾಣಲಾರೆವು ಎಂದೆನ್ನಿಸುತ್ತದೆ.◆

## ತಿದ್ದುಪಡಿ

**ಜನವರಿ ೨೦೨೪ರ ಸಂಚಿಕೆಯಲ್ಲಿ 'ಸಾತ್ವಿಕ ಪೌಷ್ಠಿಕ ಆಹಾರವೇ ಆರೋಗ್ಯಕರ ಜೀವನಕ್ಕೆ ಆಧಾರ' ಎಂಬ ಶೀರ್ಷಿಕೆಯ ಲೇಖನದಲ್ಲಿ "ಸೂರ್ಯೋದಯಕ್ಕೆ ಮೊದಲು ಮತ್ತು ಸೂರ್ಯಾಸ್ತದ ನಂತರ ಆಹಾರ ಸೇವಿಸುವುದು ಜೈನರ ಆಹಾರ ಪದ್ಧತಿ" ಎಂದು ತಪ್ಪಾಗಿ ಮುದ್ರಿತವಾಗಿದೆ. ಅದನ್ನು "ಸೂರ್ಯೋದಯದ ನಂತರ ಮತ್ತು ಸೂರ್ಯಾಸ್ತಕ್ಕೆ ಮೊದಲು ಆಹಾರ ಸೇವಿಸುವುದು ಜೈನರ ಆಹಾರ ಪದ್ಧತಿ" ಎಂದು ಓದಿಕೊಳ್ಳಬೇಕಾಗಿ ವಿನಂತಿ. ತಪ್ಪಿಗಾಗಿ ವಿಷಾದಿಸುತ್ತೇವೆ. - ಸಂಪಾದಕರು**

## ನಿತ್ಯ ಅನ್ನದಾನ- ತಿಂಗಳ ಅಂಕಿಅಂಶ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಏಪ್ರಿಲ್‌ನಲ್ಲಿ ವಿತರಿಸಲಾದ ಊಟದ ಅಂದಾಜು ಸಂಖ್ಯೆ | ಈವರೆಗೂ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ ಮ:2.00 ರಿಂದ 3.00 | 4550 | 1,93,050 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ ಮ:12.30 ರಿಂದ 1.30 | 3000 | 1,26,700 |
| 3 | ನಗರ್ತಪೇಟೆಯ ನಗರೇಶ್ವರ ದೇವಸ್ಥಾನ ಮ:12.30 ರಿಂದ 1.30 | 3000 | 1,07,900 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು, ಬೆಂಗಳೂರು ಮ:12.30 ರಿಂದ 1.30 | 4550 | 73,500 |
| 5 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು ಮ:12:30ರಿಂದ 1:30ರವರೆಗೆ | 4550 | 29,270 |
| | ಒಟ್ಟು ಅಂದಾಜು | **19,650** | **5,69,270** |

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಸಂಖ್ಯೆ | ಸ್ಥಳ | ಭಾಗವಹಿಸಿದವರು | ಚಟುವಟಿಕೆ |
|---|---|---|---|
| **434** 21/04/24 | ಬೆಂಗಳೂರು ವಿ.ವಿ. ಎನ್‌ಜಿ ಇಎಫ್ ಬಯೋ-ಪಾರ್ಕ್ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜು ಹಾಗೂ ನೃಪತುಂಗ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಹಾಗೂ ಸ್ವಯಂಸೇವಾ ಕಾರ್ಯಕರ್ತರು. | ಸ್ಥಳವನ್ನು ಸ್ವಚ್ಛ ಮಾಡಿ, ಈ ಹಿಂದೆ ನೆಟ್ಟಿದ್ದ ಗಿಡಗಳಿಗೆ ನೀರುಣಿಸಲಾಯಿತು |
| **435** 28/04/24 | ಬೆಂಗಳೂರು ವಿ.ವಿ. ಎನ್‌ಜಿ ಇಎಫ್ ಬಯೋ-ಪಾರ್ಕ್ | ಬಿಎಂಎಸ್ ಕಾಲೇಜು ಹಾಗೂ ನೃಪತುಂಗ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಹಾಗೂ ಸ್ವಯಂಸೇವಾ ಕಾರ್ಯಕರ್ತರು. | ಸ್ಥಳವನ್ನು ಸ್ವಚ್ಛ ಮಾಡಿ, ಈ ಹಿಂದೆ ನೆಟ್ಟಿದ್ದ ಗಿಡಗಳಿಗೆ ನೀರುಣಿಸಲಾಯಿತು |
| **436** 05/05/24 | ಬೆಂಗಳೂರು ವಿ.ವಿ. ಎನ್‌ಜಿ ಇಎಫ್ ಬಯೋ-ಪಾರ್ಕ್ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜು ಹಾಗೂ ನೃಪತುಂಗ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಹಾಗೂ ಸ್ವಯಂಸೇವಾ ಕಾರ್ಯಕರ್ತರು. | ಸ್ಥಳವನ್ನು ಸ್ವಚ್ಛ ಮಾಡಿ, ಈ ಹಿಂದೆ ನೆಟ್ಟಿದ್ದ ಗಿಡಗಳಿಗೆ ನೀರುಣಿಸಲಾಯಿತು |
| **437** 12/05/24 | ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯ ಮಾರಗೊಂಡನಹಳ್ಳಿ ಕೆರೆಯ ದಡದ ಮೇಲೆ | ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಉದ್ಯಮಿ ಸುದೀಪ್ ಜೀ, ಬಿಎಂಎಸ್ ಕಾಲೇಜು ಹಾಗೂ ನೃಪತುಂಗ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಹಾಗೂ ಸ್ವಯಂಸೇವಾ ಕಾರ್ಯಕರ್ತರು. | ಸ್ಥಳವನ್ನು ಸ್ವಚ್ಛ ಮಾಡಿ, ಈ ಹಿಂದೆ ನೆಟ್ಟಿದ್ದ ಗಿಡಗಳಿಗೆ ನೀರುಣಿಸಲಾಯಿತು |

# ಧೋಂಡಿಯಾ ವಾಘ್

- ಕೆ. ಜನಾರ್ದನ ತುಂಗ

ವ್ಯಕ್ತಿ ವಿಶೇಷ ಮಾಲಿಕೆ

೧೭೯೯ರಲ್ಲಿ ಟಿಪ್ಪು ಸುಲ್ತಾನನ ಮೇಲೆ ವಿಜಯ ಸಾಧಿಸಿದ ನಂತರ ಕರ್ನಾಟಕ ರಾಜ್ಯವನ್ನು ಮರಾಠರು, ನಿಜಾಮರು ಮತ್ತು ಬ್ರಿಟಿಷರು ಹಂಚಿಕೊಂಡರು. ಒಂದು ಸಣ್ಣ ಭಾಗವನ್ನು ಮೈಸೂರಿನ ಒಡೆಯರರಿಗೆ ಬ್ರಿಟಿಷರ ಆಶ್ರಿತ ಸಂಸ್ಥಾನದ ರೂಪದಲ್ಲಿ ನೀಡಿದರು. ಯುದ್ಧದಲ್ಲಿ ಉಂಟಾದ ಅಪಾರ ವೆಚ್ಚದ ನಷ್ಟಭರ್ತಿ ಮಾಡಿಕೊಳ್ಳಲು ಹೀಗೆ ಹಂಚಿಕೊಂಡ ಭಾಗದ ಜನರ ಮೇಲೆ ಅಪಾರ ಭೂಕಂದಾಯವನ್ನು ಎಲ್ಲ ಭಾಗಗಳಲ್ಲಿಯೂ ಹೇರಲಾಯಿತು. ಮೈಸೂರಿನ ಅರಸರೂ ಬ್ರಿಟಿಷರ ಬೇಡಿಕೆಗಳನ್ನು ಈಡೇರಿಸಲು ತೆರಿಗೆಗಳನ್ನು ಹೆಚ್ಚಿಸಬೇಕಾಯಿತು. ಇದರಿಂದಾಗಿ ಜನರಲ್ಲಿ ಅಸಮಾಧಾನ ತಾಂಡವವಾಡುತ್ತಿತ್ತು. ಈ ಅಸಮಾಧಾನವು ಅಲ್ಲಲ್ಲಿ ಸ್ಥಳೀಯ ಪ್ರತಿಭಟನೆಯ ರೂಪದಲ್ಲಿ ಹೊರಹೊಮ್ಮುತ್ತಿದ್ದವು.

೧೮೦೯-೧೦ ರಲ್ಲಿ ಕನ್ನಡ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕಂಡುಬಂದ ಪ್ರತಿಭಟನೆಗಳನ್ನು ಬ್ರಿಟಿಷರು ಅಡಗಿಸಿದರೂ ಈ ಪ್ರತಿಭಟನೆಯ ಅನುಭವವು ಮುಂದೆ ಕೂಟಗಳ ಮೂಲಕ ಸುವ್ಯವಸ್ಥಿತ ಹೋರಾಟಕ್ಕೆ ದಾರಿಮಾಡಿಕೊಟ್ಟವು. ಆದರೆ ಟಿಪ್ಪುವಿನ ಮರಣದ ಬೆನ್ನಲ್ಲೇ ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಅನೇಕ ಸ್ಥಳೀಯ ನಾಯಕರು ಜನರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಟವನ್ನು ಮಾಡಿದ ದಾಖಲೆ ದೊರೆಯುತ್ತದೆ.

ಅವರಲ್ಲಿ ಮೊದಲು ಕಾಣಿಸುವ ಹೆಸರು ಧೋಂಡಿಯಾ ವಾಘನದು. ಈತ ಜನಿಸಿದ್ದು ಚನ್ನಗಿರಿಯಲ್ಲಿ. ಕೆಳದಿ ಸಂಸ್ಥಾನಕ್ಕೆ ಸೇರಿದ ಶಿಕಾರಿಪುರದ ಒಬ್ಬ ಅಧಿಕಾರಿಯ ಸಹಾಯಕನಾಗಿ ವೃತ್ತಿಯನ್ನು ಆರಂಭಿಸುತ್ತಾನೆ. ಮಹತ್ವಾಕಾಂಕ್ಷಿಯಾಗಿದ್ದ ಧೋಂಡಿಯಾ ಯುದ್ಧಕಲೆಯಲ್ಲಿ ಪಳಗಿದ್ದ. ಹೈದರಾಲಿಯು ಬಿದನೂರಿನ ಮೇಲೆ ಯುದ್ಧ ಮಾಡಿ ಅದನ್ನು ವಶಪಡಿಸಿಕೊಂಡಾಗ ಆತ ಹೈದರಾಲಿಯ ಪಕ್ಷವನ್ನು ಸೇರಿ ಅವನ ಅಶ್ವದಳದ ಒಂದು ತುಕಡಿಯ ನಾಯಕ ಪದವಿಯನ್ನು ಪಡೆದುಕೊಂಡ. ಮೂರನೆಯ ಮೈಸೂರು ಯುದ್ಧದಲ್ಲಿ ಬ್ರಿಟಿಷರ ಕೈ ಮೇಲಾಗುತ್ತಿದ್ದುದನ್ನು ಗಮನಿಸಿದ ಆತ ಟಿಪ್ಪುವಿನ ಸೈನ್ಯವನ್ನು ತೊರೆದು ಸ್ವತಂತ್ರವಾಗಿ ಸೈನ್ಯವೊಂದನ್ನು ಸಂಘಟಿಸುತ್ತಾನೆ. ಮೂರನೆಯ ಮೈಸೂರು ಯುದ್ಧದ ನಂತರ ನಡೆದ ಸಂಧಾನದಂತೆ ಟಿಪ್ಪೂ ಮರಾಠರಿಗೆ ಬಿಟ್ಟುಕೊಟ್ಟ ಪ್ರದೇಶದ ಮೇಲೆ ತನ್ನ ಗಮನವನ್ನು ಹರಿಸಿ ಚಿತ್ರದುರ್ಗ, ಸವಣೂರು, ಶಿವಮೊಗ್ಗ, ಬಿದನೂರು, ಹೊನ್ನಾಳಿ, ಹರಿಹರ, ಶಿಕಾರಿಪುರ, ಕಿತ್ತೂರು, ಲೋಂಡಾ, ರಾಣೆಬೆನ್ನೂರು, ಕುಂದಗೋಳ, ಶಿರಹಟ್ಟಿ, ಕುಣಿಗಲ್, ಧಾರವಾಡ, ರಾಯಚೂರು, ಹುನಗುಂದ ಮುಂತಾದ ಪ್ರದೇಶಗಳ ನಿಯಂತ್ರಣವನ್ನು ಬಹುಬೇಗ ಸಾಧಿಸಿದ. ಉತ್ತರ ಕರ್ನಾಟಕದ ಅನೇಕ ಸಣ್ಣ ಸಣ್ಣ ಸಂಸ್ಥಾನಗಳು ಇವನಿಗೆ ಸಹಾಯ ಹಸ್ತ ಚಾಚಿದವು.

ಇವನ ಪ್ರಭಾವವನ್ನು ಗಮನಿಸಿದ ಮರಾಠರು ಇವನನ್ನು ಹಣಿಯಲು ಧೋಂಡೋಪಂತ್ ಗೋಖಲೆಯನ್ನು ನಿಯೋಜಿಸಿದರು. ಸವಣೂರಿನ ಹೋರಾಟದಲ್ಲಿ ಮರಾಠರಿಗೆ ಮೇಲುಗೈಯಾದಾಗ ಧೋಂಡಿಯಾ ನೀಡಿದ ಸಂಧಾನದ ಪ್ರಸ್ತಾಪವನ್ನು ಅವರು ಒಪ್ಪಿಕೊಳ್ಳಲಿಲ್ಲ. ಹೀಗಾಗಿ ಮರಾಠರನ್ನು ಸೋಲಿಸಲು ಆತ ಶ್ರೀರಂಗಪಟ್ಟಣಕ್ಕೆ ತೆರಳಿ ಟಿಪ್ಪೂವಿನ ನೆರವನ್ನು ಕೋರುತ್ತಾನೆ. ನೆರವು ನೀಡಲು ಮುಸಲ್ಮಾನನಾಗಿ ಮತಾಂತರಗೊಳ್ಳ ಬೇಕೆಂದು ಟಿಪ್ಪೂ ವಿಧಿಸಿದ ಷರತ್ತನ್ನು ಧೋಂಡಿಯಾ ಒಪ್ಪಿಕೊಳ್ಳದಿದ್ದಾಗ ಅವನನ್ನು ಟಿಪ್ಪೂ ಸೆರೆಯಲ್ಲಿರಿಸುತ್ತಾನೆ. ೧೭೯೪ ರಿಂದ ೧೭೯೯ ರ ವರೆಗೆ ಧೋಂಡಿಯಾ ಮತ್ತು ಅವನ ಸಹಚರರು ಟಿಪ್ಪೂವಿನ ಸೆರೆಮನೆಯಲ್ಲಿರುತ್ತಾರೆ. (ಧೋಂಡಿಯಾ ಮತಾಂತರಗೊಂಡು ಮಲಿಕ್ ಜಹಾನ್ ಖಾನ್ ಎಂದು ಹೆಸರು ಬದಲಿಸಿಕೊಂಡ ಎನ್ನುತ್ತಾರೆ, ಇದು ವಾಸ್ತವವಲ್ಲ ಎಂದು ನನ್ನೆಣಿಕೆ, ಏಕೆಂದರೆ ಮುಂದೆ ಶಿಕಾರಿಪುರದ ಹೋರಾಟದಲ್ಲಿ ಬ್ರಿಟಿಷರಿಂದ ತಪ್ಪಿಸಿಕೊಂಡು ಹೋದಾಗ ತನ್ನ ಖಡ್ಗವನ್ನು ಶಿಕಾರಿಪುರದ ಹುಚ್ಚೂರಾಯ ಸ್ವಾಮಿಗೆ ಅರ್ಪಿಸುತ್ತಾನೆ.)

೧೭೯೯ ರಲ್ಲಿ ಟಿಪ್ಪೂ ಮರಣದ ನಂತರದ ಅವ್ಯವಸ್ಥೆಯಲ್ಲಿ ಜೈಲಿನಿಂದ ಅನುಯಾಯಿಗಳ ಸಮೇತ ತಪ್ಪಿಸಿಕೊಂಡ ಧೋಂಡಿಯಾ ಚನ್ನಗಿರಿಗೆ ಮರಳಿ ಬೃಹತ್ ಸೈನ್ಯವೊಂದನ್ನು ಕಟ್ಟಿದ. ಟಿಪ್ಪೂವಿನ ಸೈನ್ಯದಲ್ಲಿದ್ದ ಅನೇಕ ನುರಿತ ಸೈನಿಕರು ಇವನ ಸೈನ್ಯವನ್ನು ಸೇರಿಕೊಂಡರು. ಒಂದು ಹಂತದಲ್ಲಿ ೩೦೦೦೦ ಕಾಲಾಳುಗಳು ಸೇರಿದಂತೆ ೭೦೦೦೦ ಜನರು ಅವನ ಸೈನ್ಯದಲ್ಲಿದ್ದರು ಎಂದು ಹೇಳುತ್ತಾರೆ. ಹೀಗೆ ಸೈನ್ಯವನ್ನು ಕಟ್ಟಿಕೊಂಡ ಧೋಂಡಿಯಾ ಬ್ರಿಟಿಷರಿಗೆ ಮತ್ತು ಮರಾಠರಿಗೆ ಸೇರಿದ ಭೂಭಾಗಗಳನ್ನು ಒಂದೊಂದಾಗಿ ಗೆಲ್ಲುತ್ತ "ಉಭಯಲೋಕೇಶ್ವರ" ಎಂದು ಕರೆಯಿಸಿಕೊಂಡನು. ಇವನ ಯಶಸ್ಸಿನಿಂದ ಉತ್ತೇಜಿತರಾದ ಇತರ ಪಾಳೇಗಾರರೂ ಬಂಡಾಯದ ಬಾವುಟ ಹಾರಿಸಿದರು.

ಇದರಿಂದ ಈಗ ಚಿಂತಿತರಾಗುವ ಸರದಿ ಬ್ರಿಟಿಷರದು. ಅದೇ ತಾನೇ ಅಧಿಕಾರ ವಹಿಸಿಕೊಂಡಿದ್ದ ಗವರ್ನರ್ ಜನರಲ್ ವೆಲ್ಲೆಸ್ಲಿ ತನ್ನ ತಮ್ಮನಾದ ಆರ್ಥರ್ ವೆಲ್ಲೆಸ್ಲಿಯನ್ನು ಧೋಂಡಿಯಾನನ್ನು ಹಿಡಿಯಲು ಕಳಿಸಿದ. ಆರ್ಥರ್ ವೆಲ್ಲೆಸ್ಲಿ ತನ್ನ ಕಾರ್ಯವನ್ನು ೧೮೦೦ ರ ಜೂನ್ ತಿಂಗಳಲ್ಲಿ ಪ್ರಾರಂಭಿಸಿದ. ಅವನಿಂದ ತಪ್ಪಿಸಿಕೊಂಡು ಮರಾಠರ ವಶದಲ್ಲಿದ್ದ ಪ್ರದೇಶವನ್ನು ಧೋಂಡಿಯಾ ಪ್ರವೇಶಿಸಿದ. ಮರಾಠಾ ಪೇಶ್ವೆಯ ಅನುಮತಿ ಪಡೆದು ವೆಲ್ಲೆಸ್ಲಿ ಧೋಂಡಿಯಾನನ್ನು ಬೆನ್ನಟ್ಟಿ ಹೋದಾಗ ಆತ ಜೂನ್ ೧೯ ಕ್ಕೆ ಹುಬ್ಬಳ್ಳಿ ಸೀಮೆಯನ್ನು ಸೇರಿಕೊಂಡ. ಧೋಂಡಿಯಾನಿಂದ ತೆರವಾದ ಪ್ರದೇಶವನ್ನು ವೆಲ್ಲೆಸ್ಲಿ ವಶಪಡಿಸಿಕೊಂಡು ಮುಂದುವರಿದ. ಬ್ರಿಟಿಷರು ಬೆನ್ನತ್ತಿ ಬಂದರೂ ಧೋಂಡಿಯಾನ ಪ್ರಭಾವ ಹೆಚ್ಚುತ್ತಲೇ ಇತ್ತು. ಅನೇಕ ಯುವಕರು ಹೊಸದಾಗಿ ಧೋಂಡಿಯಾನನ್ನು ಸೇರಿಕೊಳ್ಳತೊಡಗಿದರು. ಧೋಂಡಿಯಾ ತಮ್ಮ ಆಡಳಿತಕ್ಕೂ ಮುಳ್ಳಾಗುತ್ತಿರುವುದನ್ನು ಗಮನಿಸಿ ಮರಾಠರು ಚಿಂತಾಮಣಿ ರಾವ್ ಪಟವರ್ಧನ್ ನಾಯಕತ್ವದಲ್ಲಿ ಸೈನ್ಯವೊಂದನ್ನು ಕಳಿಸಿದರು. ಜುಲೈ ೪ ರಂದು ಕಿತ್ತೂರಿನ ಬಳಿ ನಡೆದ ಯುದ್ಧದಲ್ಲಿ ಧೋಂಡಿಯಾ, ಪಟವರ್ಧನನ್ನು ಸೋಲಿಸಿದ. ಪಟವರ್ಧನ್ ತಪ್ಪಿಸಿಕೊಂಡು ಹಳಿಯಾಳದಲ್ಲಿದ್ದ ಬ್ರಿಟಿಷರೊಂದಿಗೆ ಸೇರಿಕೊಂಡ.



ಧೋಂಡಿಯಾ ಸವಣೂರು ಕೋಟೆಯಲ್ಲಿದ್ದಾಗ ಜುಲೈ ೧೨ ರಂದು ಬ್ರಿಟಿಷರು ಸವಣೂರಿಗೆ ಮುತ್ತಿಗೆ ಹಾಕಿದರು. ಅಲ್ಲಿಂದ ತಪ್ಪಿಸಿಕೊಂಡ ಧೋಂಡಿಯಾ ತನ್ನ ಸೈನ್ಯವನ್ನು ಬಲಕಾಯಿಸುತ್ತಲೇ ಕೊಲ್ಲಾಪುರದ ರಾಜನ ಸಹಾಯ ಪಡೆಯಲು ಬಯಸಿದ. ಆದರೆ ಬ್ರಿಟಿಷರ ಬೆದರಿಕೆಯಿಂದಾಗಿ ಕೊಲ್ಲಾಪುರದ ರಾಜನಿಂದ ಸಹಾಯ ದೊರೆಯಲಿಲ್ಲ. ತನ್ನನ್ನು ಬೆನ್ನತ್ತಿದ ಬ್ರಿಟಿಷರು ಮತ್ತು ಮರಾಠರಿಂದ ತಪ್ಪಿಸಿಕೊಂಡು ನಿಜಾಮರ ಆಳ್ವಿಕೆಯಲ್ಲಿದ್ದ ರಾಯಚೂರನ್ನು ಧೋಂಡಿಯಾ ಪ್ರವೇಶ ಮಾಡಿದ. ಆದರೆ ಅಲ್ಲಿ ಬ್ರಿಟಿಷರು, ಮರಾಠರು ಮತ್ತು ನಿಜಾಮನ ಸೈನ್ಯಗಳ ನಡುವೆ ಸಿಕ್ಕಿಕೊಂಡ ಧೋಂಡಿಯಾ ೧೮೦೦ ರ ಸೆಪ್ಟೆಂಬರ್ ೧೦ ರಂದು ರಾಯಚೂರಿನ ಕೊನಗಲ್ ಕದನದಲ್ಲಿ ಹೋರಾಡುತ್ತಲೇ ವೀರಮರಣವನ್ನಪ್ಪಿದ.

ಬ್ರಿಟಿಷ್ ಸೈನ್ಯದ ನೇತೃತ್ವ ವಹಿಸಿದ್ದ ಆರ್ಥರ್ ವೆಲ್ಲೆಸ್ಲಿ ಮುಂದೆ ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಎಂದು ಪ್ರಸಿದ್ಧನಾಗಿ ವಾಟರ್ಲೂ ಕದನದಲ್ಲಿ ನೆಪೋಲಿಯನ್ ಬೋನಪಾರ್ಟ್ ನನ್ನು ಸೋಲಿಸಿದ. ಧೋಂಡಿಯಾನನ್ನು ಸೋಲಿಸಲು ಮರಾಠರು ಮತ್ತು ನಿಜಾಮರ ಸಹಕಾರವಿದ್ದರೂ ಸಾಲದು ಎಂದು ತಿಳಿದ ವೆಲ್ಲೆಸ್ಲಿ ಬಂಗಾಳದಿಂದಲೂ ಸೈನ್ಯವನ್ನು ಕರೆಸಿಕೊಂಡಿದ್ದ. ಇವನ್ನು ಗಮನಿಸಿದಾಗ ಧೋಂಡಿಯಾ ಬ್ರಿಟಿಷರಿಗೆ ಟಿಪ್ಪೂವಿಗಿಂತ ಹೆಚ್ಚು ತಲೆನೋವಾಗಿದ್ದ ಎಂದು ತಿಳಿದುಬರುತ್ತದೆ. ಸಾಮಾನ್ಯರಲ್ಲಿ ಸಾಮಾನ್ಯನಾಗಿ ಜನಿಸಿ ಬ್ರಿಟಿಷರು ಮತ್ತು ಅವರ ಮಿತ್ರರ ವಿರುದ್ಧ ಹೋರಾಡಿದ ಧೋಂಡಿಯಾನಿಗೆ ಟಿಪ್ಪೂವಿಗಿದ್ದ ಅನುಕೂಲತೆಗಳಿದ್ದಿದ್ದರೆ ಇನ್ನೇನಾಗುತ್ತಿತ್ತೋ. ಸ್ವತಃ ವೆಲ್ಲೆಸ್ಲಿಯೇ ಅವನ ಶೌರ್ಯವನ್ನು ಕೊಂಡಾಡಿ ಬರೆದ ಪತ್ರಗಳು ಲಭ್ಯವಾಗಿವೆ. ಎಡ್ವರ್ಡ್ ಕ್ಲೈವ್ ಎಂಬ ಬ್ರಿಟಿಷ್ ಅಧಿಕಾರಿ "ಒಂದು ಸ್ಥಳೀಯ ದಂಗೆಯಂತೆ ಪ್ರಾರಂಭವಾದ ಘಟನೆಯು ಧೋಂಡಿಯಾನ ಸಂಘಟನಾ ಚಾತುರ್ಯದಿಂದ ಒಂದು ಪ್ರಮುಖ ಅಂತಾರಾಷ್ಟ್ರೀಯ ಯುದ್ಧವಾಯಿತು" ಎಂದು ದಾಖಲಿಸಿದ್ದಾನೆ.

ಈ ಮಹಾವೀರನ ಸಮಾಧಿ ರಾಯಚೂರಿನ ಯಾಪಲಪರವಿಯಲ್ಲಿದೆ. ಇವನು ಶಿಕಾರಿಪುರದ ಹುಚ್ಚೂರಾಯ ಸ್ವಾಮಿಗೆ ಅರ್ಪಿಸಿದ ಖಡ್ಗವನ್ನು ವಿಜಯದಶಮಿಯ ದಿನ ಹೊರಗೆ ತೆಗೆದು ದುಷ್ಟರ ಮೇಲಿನ ವಿಜಯದ ಸಂಕೇತವಾಗಿ ಬಾಳೆಯ ಕಂಬವನ್ನು ಆ ಖಡ್ಗದಿಂದ ಕತ್ತರಿಸುತ್ತಾರೆ. ◆

# ತಿಂಗಳ ವರದಿ (15 ಏಪ್ರಿಲ್ - 15 ಮೇ 2024)

## ಶಾಂತಿನಿಕೇತನಕ್ಕೆ ಶಿಬಪುರದ ಐಐಇಎಸ್‌ಟಿ ಕೊಡುಗೆ



ಮೇ ೮ – ವಿಶ್ವಕವಿ, ಗುರುದೇವ, ಶ್ರೀ ರವೀಂದ್ರನಾಥ ಟ್ಯಾಗೋರ್ ಅವರ ಜನ್ಮ ದಿನ. ಇದನ್ನು ಶಿಬಪುರದ ಭಾರತೀಯ ಶಿಕ್ಷಣ, ವಿಜ್ಞಾನ ಹಾಗೂ ತಂತ್ರಜ್ಞಾನ (ಐಐಇಎಸ್‌ಟಿ) ಸಂಸ್ಥೆಯ ಆವರಣದಲ್ಲಿರುವ ಶ್ರೀ ರವೀಂದ್ರನಾಥ ಟ್ಯಾಗೋರ್ ಅವರ ಪ್ರತಿಮೆಯ ಬಳಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮಾತನಾಡಿ, ಐಐಇಎಸ್‌ಟಿ ಸಂಸ್ಥೆಗೆ ದೀರ್ಘವಾದ ಇತಿಹಾಸವಿದೆ, ೧೮೫೬ರಲ್ಲಿ ಪ್ರಾರಂಭವಾದ ಈ ಸಂಸ್ಥೆಗೂ ಟ್ಯಾಗೋರರಿಗೂ ಅಪೂರ್ವವಾದ ಸಂಬಂಧವಿದೆ. ಅವರು ಈ ಹಿಂದೆ ಬಂಗಾಲ ಎಂಜಿನಿಯರಿಂಗ್ ಕಾಲೇಜು ಎಂದು ಕರೆಯುತ್ತಿದ್ದ ಸಂಸ್ಥೆಗೆ ೧೯೨೦ರಲ್ಲಿ ಭೇಟಿ ನೀಡಿದ್ದರು. ಅವರು ಶಾಂತಿನಿಕೇತನವನ್ನು ಪ್ರಾರಂಭ ಮಾಡಬೇಕು ಎಂದು ನಿರ್ಣಯಿಸಿದಾಗ ಅದರ ವಿಜ್ಞಾನದ ಪ್ರಯೋಗಶಾಲೆ ಹೇಗಿರಬೇಕು?, ಶಿಕ್ಷಣ ಪದ್ಧತಿ ಹೇಗಿರಬೇಕು? ಎಂಬ ಎಲ್ಲ ಸಂಗತಿಗಳ ಕುರಿತಂತೆ ಚರ್ಚೆ ಮಾಡಲು ಈ ಕಾಲೇಜಿಗೆ ಬರುತ್ತಿದ್ದರು. ಜೊತೆಗೆ, ಈ ಕಾಲೇಜಿನ ಪ್ರೊಫೆಸರ್‌ಗಳು ಕೂಡ ಶಾಂತಿನಿಕೇತನಕ್ಕೆ ಹೋಗಿ ಪ್ರಯೋಗಾಲಯಗಳನ್ನು ಸಿದ್ಧಪಡಿಸಿಕೊಟ್ಟು ಬಂದಿದ್ದರು ಎಂದು ಹೇಳಲಾಗುತ್ತದೆ. ಈ ರೀತಿಯಾಗಿ ಶ್ರೀ ಟ್ಯಾಗೋರರಿಗೂ ನಮ್ಮ ಈ ಐಐಇಎಸ್‌ಟಿ ಸಂಸ್ಥೆಗೂ ಅವಿನಾಭಾವ ಸಂಬಂಧವಿರುವುದು ನಮಗೆ ಹೆಮ್ಮೆಯ ಸಂಗತಿ ಎಂದರು. ಶ್ರೀ ರವೀಂದ್ರನಾಥ ಟ್ಯಾಗೋರ್ ರಚನೆಯ 'ಗೀತಾಂಜಲಿ'ಯಲ್ಲಿರುವ ಹಾಡುಗಳನ್ನು ವಿದ್ಯಾರ್ಥಿಗಳು ಸುಮಧುರವಾಗಿ ಪ್ರಸ್ತುತಪಡಿಸಿದರು. ಐಐಇಎಸ್‌ಟಿ ನಿರ್ಗಮಿತ ನಿರ್ದೇಶಕ ಪಾರ್ಥಸಾರಥಿ ಹಾಗೂ ಹೊಸದಾಗಿ ನಿಯುಕ್ತರಾದ ನಿರ್ದೇಶಕ ಪ್ರೊ. ಮೂರ್ತಿ ಈ ಸಂದರ್ಭದಲ್ಲಿ ಮಾತನಾಡಿದರು.

**ಅಯೋಧ್ಯೆಯ ಅಡುಗೆ ಮನೆಗೆ ಗಣ್ಯರ ಭೇಟಿ:** ಪೂಜ್ಯ ಶ್ರೀ ಆನಂದ ಗುರೂಜಿ ಅವರು 2024ರ ಏಪ್ರಿಲ್ 15 ರಂದು ಹಾಗೂ ಖ್ಯಾತ ಹೃದ್ರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಅವರು 2024ರ ಏಪ್ರಿಲ್ 20 ರಂದು ಅಯೋಧ್ಯೆಯಲ್ಲಿರುವ ಅನ್ನದಾನದ ಅಡುಗೆಮನೆಗೆ ಭೇಟಿ ಕೊಟ್ಟಿದ್ದರು. 2024ರ ಜನವರಿ 22ರಿಂದ ಅಯೋಧ್ಯೆಯಲ್ಲಿ ಅಡುಗೆ ಮನೆ ಪ್ರಾರಂಭ ಮಾಡಲಾಯಿತು ಬೆಳಿಗ್ಗೆ ಇಡ್ಲಿ -ಸಾಂಬಾರು, ಮಧ್ಯಾಹ್ನ ಸಿಹಿ ಪೊಂಗಲ್, ಬಿಸಿಬೇಳೆಬಾತ್, ರಾತ್ರಿ ಕಿಚಡಿ ಮುಂತಾದ ವಿವಿಧ ತಿನಿಸುಗಳನ್ನು ಒಂದು ತಿಂಗಳ ಕಾಲ, ಪ್ರತಿ ನಿತ್ಯವೂ ಒಂದು ಸಾವಿರ ಜನರಿಗೆ ವಿತರಿಸಲಾಗುತ್ತಿತ್ತು. ವಿಶ್ವಹಿಂದೂ ಪರಿಷತ್ತಿನ ಕಚೇರಿಯಲ್ಲಿರುವ ಕರಸೇವಾಪುರದಲ್ಲಿ ನಡೆಯುವ ಭಂಡಾರಕ್ಕೂ ಅದಮ್ಯ ಚೇತನ ಸಂಸ್ಥೆಯಿಂದ ಇಡ್ಲಿ-ಸಾಂಬಾರು ತಯಾರು ಮಾಡಿಕೊಡಲಾಗುತ್ತಿತ್ತು. ಕರ್ನಾಟಕದಿಂದ ಬರುತ್ತಿದ್ದ ಯಾತ್ರಿಗಳಿಗೆ ಕೋರಿಕೆಯ ಮೇರೆಗೆ ಊಟದ ವ್ಯವಸ್ಥೆ ಮಾಡಲಾಗುತ್ತಿತ್ತು. ಶ್ರೀ ರಾಮನ ಪ್ರಾಣಪ್ರತಿಷ್ಠಾಪನಾ ದಿನದಿಂದ ಪ್ರಾರಂಭವಾದ ಅನ್ನದಾನದ ವ್ಯವಸ್ಥೆ ರಾಮನವಮಿಯವರೆಗೆ ಸರಳವಾಗಿ ನಡೆಯಿತು. ಈಗ ವಿಶ್ವ ಹಿಂದೂ ಪರಿಷತ್ತಿನ ಕಾರ್ಯಾಲಯದಲ್ಲಿ ಅದಮ್ಯ ಚೇತನದ ಅನ್ನದಾನ ಸೇವೆಗೆ ವ್ಯವಸ್ಥೆ ಮಾಡಿಕೊಟ್ಟಿದ್ದು, ಅಲ್ಲಿಗೆ ಅಡುಗೆ ಮನೆಯನ್ನು ಸ್ಥಳಾಂತರಿಸಲಾಗಿದೆ. ಚುನಾವಣೆಯಲ್ಲಿ ಮತದಾನ ಮಾಡುವ ಉದ್ದೇಶದಿಂದ ಹಾಗೂ ಸತತ ಮೂರು ತಿಂಗಳವರೆಗೆ ಮನೆಯಿಂದ ದೂರವಿದ್ದುದರಿಂದ ಅಲ್ಲಿನ ಸಿಬ್ಬಂದಿಯನ್ನು ಈಗ ಹಿಂದಕ್ಕೆ ಕರೆಯಿಸಿಕೊಳ್ಳಲಾಗಿದೆ. ಅದಮ್ಯ ಚೇತನ ಸಂಸ್ಥೆಯ ವತಿಯಿಂದ ಸತತ ನೂರು ದಿನಗಳ ಅನ್ನದಾನ ನಡೆದಿದ್ದು, ಅದನ್ನು ಈಗ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ, ಅನ್ನದಾನವನ್ನು ಪುನರಾರಂಭಿಸುವ ದಿನವನ್ನು ನಂತರ ತಿಳಿಸಲಾಗುವುದು ಎಂದು ಸಂಸ್ಥೆಯ ಅಧ್ಯಕ್ಷೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ತಿಳಿಸಿದ್ದಾರೆ.





**ಗಣ್ಯರ ಭೇಟಿ:** ಬೀದರ ನಗರದ ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ ಆಸ್ಪತ್ರೆಯ ಅಧ್ಯಕ್ಷ ಶ್ರೀ ಸೂರ್ಯಕಾಂತ ನಾಗಮಾರಪಳ್ಳಿ ಅವರು ಮೇ.೧೪ರಂದು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದ್ದರು. ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಬಯೋಕೆಮಿಸ್ಟ್ರಿ ವಿಭಾಗದ ಡಾ. ಪ್ರಶಾಂತ್ ಹಾಗೂ ಧಾರವಾಡದ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ ಡಾ. ರವಿಕುಮಾರ್ ಬಿ. ಸುರಪುರ ಅವರು ಅನಂತಕುಮಾರ್ ಪ್ರೇರಣಾ ಕೇಂದ್ರಕ್ಕೆ ೨೦೨೪ರ ಏ.೨೭ರಂದು ಭೇಟಿ ನೀಡಿದ್ದರು. ◆



ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Venkatesh Manu / Trivikram Joshi**
Inputs: **Poornaprazna / ACF / AKP**
Photographs: **Gopal TS / Internet Sources / AKP / ACF**
Sketch: **Raghupathi Sringeri / Krishna Murthy K S**
Acknowledgements: **GM Inamdar / Abhay Kumar Patil / Ramakrishna Poonja / A Muralidhar**
Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ರಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಐಶ್ವರ್ಯಾ ಅನಂತಕುಮಾರ್, ವಿಜೇತಾ ಅನಂತಕುಮಾರ್, ದಿವ್ಯೇಶ್ ಪ್ರತಾಪ್ ಮತ್ತು ಶ್ರೀಮತಿ ಪದ್ಮಿನಿ ಓಕ್ ಲೋಕಸಭಾ ಚುನಾವಣೆಯಲ್ಲಿ ಮತದಾನವನ್ನು ಮಾಡಿದರು.



ಗಣ್ಯರಾದ ಶ್ರೀ ಲಕ್ಷ್ಮಣರಾವ್ ಓಕ್, ಶ್ರೀ ವಸಂತ ಗೋಖಲೆ ಮತ್ತು ಶ್ರೀ ಮಾಧವ ಗೋಖಲೆಯವರು ತಮ್ಮ ಕುಟುಂಬದೊಡನೆ ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆಗೆ 2024ರ ಮೇ. 4ರಂದು ಭೇಟಿ ನೀಡಿದ್ದರು.



ಕೆಪಿಐಟಿ ಟೆಕ್ನಾಲಜಿಸ್ ಲಿಮಿಟೆಡ್‌ನ ಸಿಎಸ್ ಆರ್ ಮುಖ್ಯಸ್ಥರಾದ ಶ್ರೀ ತುಷಾರ್ ಜುವೇಕರ್, ಸಿಎಸ್‌ಆರ್ ತಂಡದ ಶ್ರೀ ರಂಜಿತ್ ಕುಮಾರ್, ಯುತ್ ಫಾರ್ ಸೇವಾ ಸಂಸ್ಥೆಯ ರಾಷ್ಟ್ರೀಯ ಸಂಚಾಲಕ ಶ್ರೀ ವೆಂಕಟೇಶ ಮೂರ್ತಿ ಹಾಗೂ ಶ್ರೀ ಸಂತೋಷ್ 2024ರ ಮೇ 8ರಂದು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದರು. ಸಂಸ್ಥೆಯ ಟ್ರಸ್ಟಿ ಪ್ರದೀಪ್ ಓಕ್ ಅವರು ಮಾಹಿತಿ ನೀಡಿದರು.



ತಮಿಳುನಾಡಿನ ಕರೂರು ಜಿಲ್ಲೆಯ ಕರೂರು ಶಾರದಾ ಆಶ್ರಮದ, ಸೇವಾಕಾಂಕ್ಷಿಗಳು 2024ರ ಏ. 27 ರಂದು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿ, ಮಧ್ಯಾಹ್ನದ ಊಟ ಸೇವಿಸಿದರು.




ಬೆಂಗಳೂರಿನ ಬಸವನಗುಡಿಯ ವಿಮೆನ್ಸ್ ಪೀಸ್ ಲೀಗ್ ಶಾಲೆಯ ಬೇಸಿಗೆ ಶಿಬಿರದ ಮುಕ್ತಾಯ ಸಮಾರಂಭದ ಮುಖ್ಯ ಅತಿಥಿಯಾಗಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿ, ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ಹಾಗೂ ಬಹುಮಾನಗಳನ್ನು ವಿತರಿಸಿದರು



ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯ ಮಾರಗೊಂಡನಹಳ್ಳಿ ಕೆರೆಯ ದಡದ ಮೇಲೆ ಅದಮ್ಯ ಚೇತನ ಸಂಸ್ಥೆಯ ಹಸಿರು ಭಾನುವಾರದ 437ನೇ ಕಾರ್ಯಕ್ರವನ್ನು 2024ರ ಮೇ 12 ರಂದು ಹಮ್ಮಿಕೊಳ್ಳಲಾಗಿತ್ತು.



ಬೆಂಗಳೂರಿನ ಕೆ.ಆರ್. ರಸ್ತೆಯಲ್ಲಿರುವ ಲಯನೆಸ್ ಕ್ಲಬ್‌ನ ಶ್ರೀಮತಿ ನಳಿನಿ ಕೃಷ್ಣ ಹಾಗೂ ಸದಸ್ಯರು 2024ರ ಮೇ. 16ರಂದು ಅದಮ್ಯ ಚೇತನಕ್ಕೆ ಭೇಟಿ ನೀಡಿ, 'ಅನ್ನಪೂರ್ಣ' ಅಡುಗೆಮನೆಯ ಚಟುವಟಿಕೆಗಳನ್ನು ವೀಕ್ಷಿಸಿದರು.



ಬೆಂಗಳೂರಿನ ವಿಶ್ವೇಶ್ವರಪುರದ ಕಾನೂನು ಕಾಲೇಜಿನ ವಿದ್ಯಾರ್ಥಿಗಳು 2024ರ ಏ. 27ರಂದು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದ್ದರು. ಇವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಪ್ರಾಯೋಜಿಸಿತ್ತು.

# ಅನಂತ ಚಿತ್ರಸಂಪುಟ

ಜಗತ್ತು ಮೇ ೧ನ್ನು ವಿಶ್ವ ಕಾರ್ಮಿಕರ ದಿನವನ್ನಾಗಿ ಆಚರಿಸಿದರೆ ಅನಂತಕುಮಾರ್ ವರ್ಷವಿಡೀ ಕಾರ್ಮಿಕ ಹಿತಚಿಂತನೆ ನಡೆಸುತ್ತಿದ್ದರು. ಪೌರಕಾರ್ಮಿಕರಿಂದ ಹಿಡಿದು ಸಂಘಟಿತ ವಲಯದ ಕಾರ್ಮಿಕರ ವರೆಗೆ ಎಲ್ಲರ ಜೊತೆ ಅನಂತಕುಮಾರ್ ಆತ್ಮೀಯವಾಗಿ ಬೆರೆಯಬಲ್ಲವರಾಗಿದ್ದರು.













